ಜಾನ್ ಫೆಯ್ತ್‌ಫುಲ್ ಫ್ಲೀಟ್

ವ್ಯಕ್ತಿ ಪರಿಚಯ



ಕ್ಯಾತನಹಳ್ಳಿ ರಾಮಣ್ಣ

ಜನಪ್ರಿಯ ಜಾನಪದ ಪುಸ್ತಕ ಮಾಲೆ – ೪೯

ಜಾನ್ ಫೆಯ್ತ್‌ಫುಲ್ ಫ್ಲೀಟ್

ವ್ಯಕ್ತಿ ಪರಿಚಯ

ಕ್ಯಾತನಹಳ್ಳಿ ರಾಮಣ್ಣ

ಕರ್ನಾಟಕ ಜಾನಪದ ಪರಿಷತ್ತು
ನಂ.1, ಜಲದರ್ಶಿನಿ ಬಡಾವಣೆ,
ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ಹೊಸ ಬಿ.ಇ.ಎಲ್. ರಸ್ತೆ, ಬೆಂಗಳೂರು – 560 054

JOHN FAITHFUL FLEET -
A pen portrait - by KYATANAHALLI RAMANNA.
Published by : KARNATAKA JANAPADA PARISHATHU,
No.1, Jaladarshini Layout, Near M.S. Ramaiah Hospital Gate,
New B.E.L. Road, Bengaluru - 560 054. Ph : 080-23605033.
Pages : 32 Price : Rs. 10. 2010.

ಪ್ರಥಮ ಮುದ್ರಣ ೨೦೧೦

ಪ್ರತಿಗಳು ೨೦೦೦

ಪುಟಗಳು ೩೨

ಬೆಲೆ ರೂ.೧೦ (ಹತ್ತು ರೂಪಾಯಿ)

ಮುದ್ರಕರು ಕೃತಿಕ ಪ್ರಿಂಟ್-ಆ್ಯಡ್
ನಂ. 58, 1ನೇ ಕ್ರಾಸ್, ಜೆ.ಕೆ. ಪುರಂ
ವಿನಾಯಕನಗರ, ಆಡುಗೋಡಿ ಪೋಸ್ಟ್
ಬೆಂಗಳೂರು - 560 030
ಮೊಬೈಲ್ - 98441 14958

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ 'ಜನಪ್ರಿಯ ಜಾನಪದ ಪುಸ್ತಕ ಮಾಲೆ' ಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತಸಾಹಿತ್ಯದ ಸೋದಾಹರಣ ವ್ಯಾಖ್ಯಾನ – ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ **ಕ್ಯಾತನಹಳ್ಳಿ ರಾಮಣ್ಣ** ಅವರು **ಜಾನ್ ಫೆಯ್ತ್‌ಫುಲ್ ಫ್ಲೀಟ್** ಅವರನ್ನು ಕುರಿತ ಗ್ರಂಥವನ್ನು ಬರೆದುಕೊಟ್ಟಿದ್ದಾರೆ. ಗ್ರಂಥದ ಲೇಖಕರಿಗೂ ಗ್ರಂಥ ಪ್ರಕಟಣಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ನಾಡೋಜ ಡಾ. ಜಿ. ನಾರಾಯಣ
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

ಬೆಂಗಳೂರು
೨೦-೦೪-೨೦೧೦

ಜಾನ್ ಫೆಯ್ತ್‌ಫುಲ್ ಫ್ಲೀಟ್

೧

ಬೇರೆ ಬೇರೆ ಉದ್ದೇಶಗಳಿಗಾಗಿ ಭಾರತಕ್ಕೆ ಬಂದ ಬ್ರಿಟಿಷ್ ಅಧಿಕಾರಿಗಳಲ್ಲಿ ಅನೇಕರು ಅನಿವಾರ್ಯವಾಗಿ ಕರ್ನಾಟಕದ ನೆಲದಲ್ಲೂ ತಮ್ಮ ತಮ್ಮ ಕರ್ತವ್ಯಗಳನ್ನು ನಿರ್ವಹಿಸಬೇಕಾಗಿ ಬಂದದ್ದು ಅಂದಿನ ಒಂದು ಸಹಜ ಸಂಗತಿ. ಹಾಗೆ ಕರ್ನಾಟಕಕ್ಕೆ ಬಂದ ಅನೇಕರು ಕರ್ತವ್ಯಕ್ಕಷ್ಟೇ ತಮ್ಮ ಕೆಲಸಗಳನ್ನು ಸೀಮಿತಗೊಳಿಸಿಕೊಳ್ಳದೆ, ಬಿಡುವಿನ ವೇಳೆಗಳಲ್ಲಿ ಇಲ್ಲಿನ ಸಾಂಸ್ಕೃತಿಕ ಜಗತ್ತಿಗೆ ಪ್ರವೇಶಿಸತೊಡಗಿದ್ದರಿಂದ ಅನೇಕ ಅಮೂಲ್ಯ ಸಂಪತ್ತು ನಮಗೆ ದೊರೆಯಿತು. ರೈಸ್, ಕಿಟ್ಟೆಲ್, ಗೋವರ್, ಮೊಗ್ಲಿಂಗ್, ರೀವ್ ಮುಂತಾದವರು ಕನ್ನಡಕ್ಕೆ ಮಾಡಿದ ಉಪಕಾರ ಅಷ್ಟಿಷ್ಟಲ್ಲ. ಅವರ ಹಾದಿಯಲ್ಲೇ ಪ್ರಸ್ತುತ ವಿದ್ವಾಂಸರಾದ ಡಾ. ಜಾನ್ ಫೆಯ್ತ್‌ಫುಲ್ ಫ್ಲೀಟ್ ಅವರು ಕೂಡ ನಡೆದು ಕನ್ನಡ ಶಾಸನ ಕ್ಷೇತ್ರಕ್ಕೆ, ಕನ್ನಡ ಇತಿಹಾಸ ಕ್ಷೇತ್ರಕ್ಕೆ, ಕನ್ನಡ ಜಾನಪದ ಕ್ಷೇತ್ರಕ್ಕೆ, ಅಮೂಲ್ಯ ಕೊಡುಗೆಯನ್ನು ನೀಡಿದ್ದಾರೆ.

ಫ್ಲೀಟ್ ಅವರು ಹುಟ್ಟಿದ್ದು ಇಂಗ್ಲೆಂಡಿನ ಚಿಸ್ವಿಕ್ ಜಿಲ್ಲೆಯಲ್ಲಿ. ತಂದೆ ಜಾನ್ ಜಾರ್ಜ್ ಫ್ಲೀಟ್, ತಾಯಿ ಎಸ್ತರ್ ಫೆಯ್ತ್‌ಫುಲ್. ಲಂಡನ್ ವಿಶ್ವವಿದ್ಯಾನಿಲಯದಲ್ಲಿ ವ್ಯಾಸಂಗ ಮಾಡಿದ ಫ್ಲೀಟರು ಸಂಸ್ಕೃತವನ್ನು ಐಚ್ಛಿಕ ಭಾಷೆಯಾಗಿ ಅಭ್ಯಾಸ ಮಾಡಿದರು. ಥಿಯೋಡರ್ ಗೋಲ್ಡ್‌ಸ್ಟಕರ್ ಅವರು ಫ್ಲೀಟರ ಸಂಸ್ಕೃತ ಗುರುಗಳು. ೧೮೬೭ರಲ್ಲಿ ಭಾರತಕ್ಕೆ ಬಂದ ಫ್ಲೀಟರು

ಮೊಟ್ಟಮೊದಲು ಬೊಂಬಾಯಿಯ ರೆವಿನ್ಯೂ ಇಲಾಖೆಯಲ್ಲಿ ಅಸಿಸ್ಟೆಂಟ್ ಕಲೆಕ್ಟರ್ ಹುದ್ದೆಗೆ ನೇಮಕವಾದರು. ಅಲ್ಲಿಂದಾಚೆಗೆ ಕೊಲ್ಲಾಪುರ, ದಕ್ಷಿಣ ಮರಾಠ, ಸೊಲ್ಲಾಪುರ ಮುಂತಾದ ಸ್ಥಳಗಳಲ್ಲಿ ವಿವಿಧ ಹುದ್ದೆಗಳನ್ನು ವಹಿಸಿಕೊಂಡು ಕೆಲಸಮಾಡಿದರು. ಅಸಿಸ್ಟೆಂಟ್ ಕಲೆಕ್ಟರ್, ಶಿಕ್ಷಣಾಧಿಕಾರಿ, ಅಸಿಸ್ಟೆಂಟ್ ಪೊಲಿಟಿಕಲ್ ಏಜೆಂಟ್, ಶಾಸನಶಾಸ್ತ್ರಜ್ಞ, ಜೂನಿಯರ್ ಕಲೆಕ್ಟರ್, ಸೀನಿಯರ್ ಕಲೆಕ್ಟರ್, ಕಸ್ಟಮ್ಸ್ ಕಮಿಷನರ್ ಇವು ಫ್ಲೀಟರು ನಿರ್ವಹಿಸಿದ ಕೆಲವು ಹುದ್ದೆಗಳು. ಇಷ್ಟೆಲ್ಲ ಬಗೆಯ ಹುದ್ದೆಗಳಲ್ಲಿ ಇದ್ದುಕೊಂಡೂ ಅವರು ಕನ್ನಡ ಭಾಷೆ ಸಾಹಿತ್ಯಗಳ ಬಗ್ಗೆ, ಲಾವಣಿಗಳ ಬಗ್ಗೆ, ಅಧ್ಯಯನ ನಡೆಸಿರುವ ವಿದ್ವಾಂಸರು. ಶಾಸನ ಶಾಸ್ತ್ರದಲ್ಲೂ ಫ್ಲೀಟರದು ದೊಡ್ಡ ಹೆಸರು. ಶಾಸನಶಾಸ್ತ್ರದ ಮೂಲ ಸಿದ್ಧಾಂತಗಳನ್ನು ಕುರಿತು, ಮೂಲ ದ್ರವ್ಯಗಳನ್ನು ಕುರಿತು, ಆಳವಾದ ಅಧ್ಯಯನ ನಡೆಸಿರುವ ಅವರು ಬರೆದಿರುವ ಒಂದು ಅಮೂಲ್ಯವೂ ದೀರ್ಘವೂ ಆದ ಲೇಖನವೊಂದನ್ನು ಕನ್ನಡಕ್ಕೆ ಅನುವಾದಿಸಿ ಡಾ. ಸಿ.ಪಿ.ಕೆ. ಅವರು 'ಶಾಸನಶಾಸ್ತ್ರ ಪರಿಚಯ' ಎಂಬ ಹೆಸರಿನಲ್ಲಿ ಪುಸ್ತಕವೊಂದನ್ನು ಪ್ರಕಟಿಸಿದ್ದಾರೆ.

ಒಂದುನೂರಾ ಇಪ್ಪತ್ತೈದು ವರ್ಷಗಳ ಹಿಂದೆ ಫ್ಲೀಟ್ ಅವರು ಕೆಲಕಾಲ 'ಇಂಡಿಯನ್ ಆಂಟಿಕ್ವರಿ' ಎಂಬ ಪತ್ರಿಕೆಯ ಸಂಪಾದಕರಾಗಿದ್ದರು. ಆ ಅವಧಿಯಲ್ಲಿ, ಹಿಂದೆಯೇ ಸಂಗ್ರಹಿಸಿಟ್ಟುಕೊಂಡಿದ್ದ ಹಾಡುಗಳಲ್ಲಿ ಒಂದೊಂದೇ ಲಾವಣಿಯನ್ನು ಆಗಾಗ ಪ್ರಕಟಿಸತೊಡಗಿದರು. ಹೀಗೆ ೧೮೮೫–೧೮೯೦ರ ನಡುವೆ ಐದು ಲಾವಣಿಗಳನ್ನು ಪ್ರಟಕಟಿಸಿದರು.

೧೮೮೫ರಲ್ಲಿ ಮೊದಲನೆಯ ಲಾವಣಿಯನ್ನು ಪ್ರಕಟಿಸುವ ಮುಂಚೆ ಅದೇ ಸಂಚಿಕೆಯಲ್ಲಿ ಕನ್ನಡ ಲಾವಣಿಗಳನ್ನು ಕುರಿತಂತೆ ಪ್ರಸ್ತಾವಿಕವಾಗಿ A selection of Kanarese Ballads ಎಂಬ ಲೇಖನವೊಂದನ್ನು

ಪ್ರಕಟಿಸಿದರು. ಆ ಲೇಖನದಲ್ಲಿ ಅಷ್ಟುಹೊತ್ತಿಗಾಗಲೇ ಜಾನಪದ ಕ್ಷೇತ್ರದಲ್ಲಿ ನಡೆದಿದ್ದ ಕೆಲಸಗಳನ್ನು ಫ್ಲೀಟ್ ಪ್ರಸ್ತಾಪಿಸಿದ್ದಾರೆ. ಚಾರ್ಲ್ಸ್ ಇ. ಗೋವರ್, ಆರ್.ಸಿ. ಟೆಂಪಲ್, ಜಿ.ಎ. ಗ್ರಿಯರ್‌ಸನ್ ಅವರುಗಳು ಬೇರೆಬೇರೆ ಭಾರತೀಯ ಭಾಷೆಗಳಲ್ಲಿ ಮಾಡಿರುವ ಕೆಲಸಗಳನ್ನು ಕುರಿತು ಹೇಳುತ್ತಾರೆ. ಅದಕ್ಕಿಂತ ಮುಖ್ಯವಾಗಿ ಕರ್ನಾಟಕದ ಜನಜೀವನದ ಸ್ಥಿತಿಗತಿಗಳು ಹೇಗಿದ್ದವು ಎಂಬುದನ್ನು ವಿವರಿಸಿದ್ದಾರೆ. ಒಂದು ಚಿತ್ರ ಹೀಗಿದೆ :

"ಬ್ರಿಟಿಷ್ ಅಧಿಕಾರದ ಏಕೀಕರಣದ ಸಮಯದಲ್ಲಿ ಸ್ಥಳೀಯ ಆಳ್ವಿಕೆಯಿಂದುಂಟಾಗಿದ್ದ, ಪರಂಪರಾಗತ ಪ್ರಭಾವಕ್ಕೆ ಸಿಕ್ಕಿಬಿದ್ದಿದ್ದ ಕಾನೂನುರಹಿತ ಜೀವನಕ್ಕೆ ಜನ ಒಗ್ಗಹೋಗಿದ್ದರು. ಪ್ರತಿಯೊಬ್ಬನೂ ತನ್ನ ನೆರೆಹೊರೆಯವರೊಂದಿಗೆ ವಿರೋಧಿಯಾಗಿದ್ದಾಗ, ಚಲಾವಣೆಗೆ ಬಂದ ಬ್ರಿಟಿಷ್ ಆಳ್ವಿಕೆಯ ಕಾನೂನು ಕಟ್ಟಳೆಗಳು ಈ ಎಲ್ಲರಿಗೂ ವಿರುದ್ಧವಾದುದರಿಂದ, ಶಾಂತಿ ದಯೆ ಮತ್ತು ನಿಯಮಿತ ಅಧಿಕಾರಿಗಳಿಗೆ ನಿರ್ವಾಹವಿಲ್ಲದೆ ಅವರು ವಿಧೇಯರಾಗಬೇಕಾಯಿತು".

ಹೀಗೆ ಜನಜೀವನದಲ್ಲಿನ ಸ್ಥಿತಿಗತಿಗಳನ್ನು ಹೇಳುವುದರ ಜೊತೆಗೆ ಕನ್ನಡದಲ್ಲಿ ಹಾಡಲ್ಪಡುತ್ತಿದ್ದ ಲಾವಣಿಗಳ ಐತಿಹಾಸಿಕತೆ, ಛಂದಸ್ಸು ಇತ್ಯಾದಿಗಳ ಬಗ್ಗೆಯೂ ಫ್ಲೀಟ್ ತಮ್ಮ ಲೇಖನದಲ್ಲಿ ಪ್ರಸ್ತಾಪಿಸುತ್ತಾರೆ.

೨

ಅಷ್ಟೇ ಅಲ್ಲ, ಪ್ರಕಟಿಸಿದ ಲಾವಣಿಗಳ ಐತಿಹಾಸಿಕ ಹಿನ್ನೆಲೆಯನ್ನು ಕುರಿತಂತೆ ಪ್ರತಿಯೊಂದು ಲಾವಣಿಯ ಪ್ರಾರಂಭದಲ್ಲಿ ವಿವರಣಾರೂಪದ ಪುಟ್ಟಪುಟ್ಟ ಲೇಖನಗಳನ್ನೂ ನೀಡಿದ್ದಾರೆ. ಉದಾಹರಣೆಗೆ ಸಂಗೊಳ್ಳಿ

ರಾಯಣ್ಣನ ದಂಗೆ ಎಂಬ ಲಾವಣಿ ಪ್ರಾರಂಭದಲ್ಲಿ ಇತಿಹಾಸಕಾರ ಎಚ್.ಜೆ. ಸ್ಟೋಕ್ಸ್ ಅವರ ಮಾತುಗಳನ್ನು ಬಳಸಿಕೊಂಡಿರುವುದನ್ನು ನೋಡಬಹುದು:

"ಈ ಜಿಲ್ಲೆಯ (ಬೆಳಗಾವಿ ಜಿಲ್ಲೆ) ಮತ್ತೊಂದು ಮುಖ್ಯ ಘಟನೆಯೆಂದರೆ ಸಂಗೊಳ್ಳಿ ರಾಯಣ್ಣನ ದಂಗೆ. ಅವನು ಸಂಗೊಳ್ಳಿಯ ತೆರಿಗೆ ಅಧಿಕಾರಿಯಾಗಿ ಕಿತ್ತೂರ ದೇಸಾಯಿಯರ ಚಾಕರರಲ್ಲೊಬ್ಬನಾಗಿದ್ದ.... ಕಿತ್ತೂರಿನ ದೇಸಾಯಿಗಳು ತಮ್ಮ ರಾಜ್ಯದ ಬಡಜನತೆಯ ಬಗ್ಗೆ ಯಾವಾಗಲೂ ಕರುಣೆಯನ್ನು ತೋರುತ್ತಿದ್ದವರು... ೧೮೨೯ರ ಮೊದಲಲ್ಲಿ ರಾಯಣ್ಣ 'ಬೀಡಿ' ಯಲ್ಲಿದ್ದ ಕಚೇರಿಯನ್ನು ಸುಡುವುದರೊಂದಿಗೆ ತನ್ನ ಬಂಡಾಯವನ್ನು ಪ್ರಾರಂಭಿಸಿದ. ಆಗ ಅವನಲ್ಲಿ ಕೇವಲ ನೂರು ಜನ ಮಾತ್ರ ಇದ್ದರು. ಜನಪ್ರಿಯತೆ ಹೆಚ್ಚುತ್ತ ಹೋದಂತೆ ಅತಿ ಕಡಿಮೆ ಕಾಲದಲ್ಲೇ ರಾಯಣ್ಣ ಸಾವಿರ ಜನರ ನಾಯಕನಾಗಿದ್ದ. ಅವನಿಗೆ ವಿರುದ್ಧವಾಗಿ ದಂಗೆ ಹುಟ್ಟಿಕೊಂಡಿದೆಯೆಂದು ಪ್ರಚುರವಾಗಿದ್ದರೂ ಅವು ತನ್ನನ್ನು ಸೆರೆಹಿಡಿಯಲು ನಡೆಯುತ್ತಿರುವ ಸಂಚುಗಳನ್ನು ಅಡಗಿಸಲು ಅವನೇ ಮಾಡಿದ ತಂತ್ರಗಳಾಗಿದ್ದುವು..."

ಹೀಗೆ ಫ್ಲೀಟ್ ಅವರು ಸ್ಟೋಕ್ಸ್ ಹಾಗೂ ಇತರ ಮೂಲಗಳಿಂದ ವಾಸ್ತವಾಂಶಗಳನ್ನು ಸಂಗ್ರಹಿಸಿ ಸಂಬಂಧಪಟ್ಟ ಲಾವಣಿಗಳ ಮೊದಲಲ್ಲಿ ನೀಡಿದ್ದಾರೆ. ಈ ಬಗೆಯ ಕ್ರಮದಿಂದ ಲಾವಣಿಗಳನ್ನು ಕಟ್ಟಿ ಹಾಡಿ ಪ್ರಸಾರ ಮಾಡಿದ ಕಲಾವಿದರ ಸ್ಥಾನವನ್ನು ನಿಗದಿಗೊಳಿಸಲು ಸಾಧ್ಯವಾಗಿದೆ. ಫ್ಲೀಟರು ಇಂಡಿಯನ್ ಆಂಟಿಕ್ವರಿಯಲ್ಲಿ ಪ್ರಕಟಿಸಿದ ಐದೂ ಲಾವಣಿಗಳೂ ವಾಸ್ತವಾಂಶಗಳಿಗೆ ನಿಷ್ಠವಾಗಿರುವುದನ್ನು ಕಾಣಬಹುದು.

ಬ್ರಿಟಿಷರ ಆಳ್ವಿಕೆಯ ಹದ್ದುಮೀರಿದ ವರ್ತನೆಯಿಂದ ರೇಗಿ, ನೆಪ ಯಾವುದಾದರೂ ಸ್ವಾತಂತ್ರ್ಯಕ್ಕಾಗಿ ಹೋರಾಡ ಮಡಿದ ವೀರ ಕನ್ನಡಿಗನೊಬ್ಬನ

ಕಥೆ ಸಂಗೊಳ್ಳಿ ರಾಯಣ್ಣನನ್ನು ಕುರಿತ ಲಾವಣಿ. ತನ್ನ ಸಂಸ್ಥಾನವನ್ನು ಪೂರ್ವಸ್ಥಿತಿಗೆ ತರಲು ಹೊರಟ ರಾಯಣ್ಣನಿಗೆ ದಂಡನ್ನು ಕೊಟ್ಟು ತಕ್ಕ ಬೆಂಬಲವನ್ನು ನೀಡಿದ ಸುರಪುರದ ಅರಸರನ್ನು ಲಾವಣಿಕಾರ ಮರೆತಿಲ್ಲ. ದಕ್ಕಿದ ದಂಡಿಗೆ ತಕ್ಕ ನಾಯಕನಾಗುತ್ತಾನೆ ರಾಯಣ್ಣ. ಶಿಸ್ತಿಗೆ ಪ್ರಾಧಾನ್ಯ ನೀಡುವ ರಾಯನ್ಣನ ಮುಂಜಾಗ್ರತೆ ಯಾರೂ ತಲೆದೂಗುವಂಥದು. ಶಿಸ್ತಿಗೊಳಪಟ್ಟ ಸೈನಿಕರೂ ಖುಷಿ ಬಂದಾಗ "ಜಿಗತಾ ಮಾಡತಾರ" ಎಂಬಲ್ಲಿ ಅವರ ಶಿಸ್ತನ್ನು ಕಾಯುವ ಆತ್ಮೀಯ ನಾಯಕತ್ವ ವ್ಯಕ್ತವಾಗುತ್ತದೆ. ಬೆನ್ನಾಡಲು ಹುಡುಕುತ್ತಾ ಬಂದ ತಮಗಿಂತ ಅಧಿಕ ಸಂಖ್ಯೆಯಲ್ಲಿದ್ದ ಎದುರಾಳೀ ಸೈನ್ಯವನ್ನು "ಗಿಡಕ ಜ್ಯಾಂವಿಗಿ ಕಟ್ಟು"ವುದರ ಮೂಲಕ ಮೋಸಗೊಳಿಸಿ ತರಿದು ಕೊಲ್ಲುವ ದೃಶ್ಯ, ಇಷ್ಟನ್ನೆಲ್ಲ ಕ್ಷಣಾರ್ಧದಲ್ಲಿ ಯೋಚಿಸಿ ನಿರ್ಧರಿಸಿ ಕಾರ್ಯರೂಪಕ್ಕಿಳಿಸುವ ರಾಯಣ್ಣನ ಮೇಧಾವಿತನ, ರೋಮಾಂಚಕಾರಿ. ಸುಭೇದಾರನ ದಂಡಿನಲ್ಲಿ ಮದ್ದು ತೀರಿಹೋದ ಸುಳಿವು ಕಂಡೊಡನೆ "ಕುರಿಮಂದೆಯಲ್ಲಿ ತೋಳ ಹೊಕ್ಕಂತೆ" ರಾಯಣ್ಣ ಆ ದಂಡಿನಲ್ಲಿ ನುಗ್ಗುವ ಚಿತ್ರವೂ, "ಮುರಮುರದ ವೊಗವೊಗದ ಹಿರಿಹಿರಿದ ಕಡದಾರ ಕತ್ತೀಲಿ" ಎಂಬ ವರ್ಣನೆಯೂ ರಾಯಣ್ಣನ ಪಡೆಯ ಧೈರ್ಯಸಾಹಸಗಳ ಶಿಸ್ತಿನ ಸ್ಪಷ್ಟ ಚಿತ್ರವನ್ನು ಮೂಡಿಸುತ್ತವೆ. "ಸುತ್ತುಗಟ್ಟಿ ಕತ್ತಿಮಂದಿ ಯತ್ತ್ಯೆತ್ ಹೋಗಗೊಡದ ಕಡದಾರ" ಎಂಬಲ್ಲಿ ಅವರ ಚುರುಕುತನದ ಶಿಸ್ತಿನ ಪರಾಕಾಷ್ಠೆ ವ್ಯಕ್ತವಾಗುತ್ತದೆ. ರಾಯಣ್ಣ ಚಮತ್ಕಾರದಿಂದ ಕಚೇರಿಯೊಳಕ್ಕೆ ನುಗ್ಗಿ ಬೆಂಕಿಹಚ್ಚುವ ಪ್ರಕರಣವು ಭಗತ್‌ಸಿಂಗ್ ಸಾಹಸವೊಂದನ್ನು ನೆನಪಿಗೆ ತರುತ್ತದೆ.

ಬ್ರಿಟಿಷರ ದಬ್ಬಾಳಿಕೆಯ ಆಡಳಿತದ ಬಗ್ಗೆ ರಾಯಣ್ಣ ಎಂಥ ಉಗ್ರ ಅಭಿಪ್ರಾಯಗಳನ್ನು ಹೊಂದಿದ್ದ ಎಂಬುದರ ವಾಚ್ಯವರ್ಣನೆಗಳು ಲಾವಣಿಯಲ್ಲಿ

ಇಲ್ಲದಿದ್ದರೂ ಅವನ ದಂಗೆಗಳ, ಲೂಟಿ ಪ್ರಕರಣಗಳ, ಭಯಂಕರ ರೂಪವನ್ನು ವರ್ಣಿಸುವುದರ ಮೂಲಕವೇ ಲಾವಣಿಕಾರ ರಾಯಣ್ಣನ ಅಭಿಪ್ರಾಯಗಳನ್ನು ಮನಮುಟ್ಟುವಂತೆ ವರ್ಣಿಸಿದ್ದಾನೆ. ಶಮಸರಗಡಕ್ಕೆ ಹಾಕಿದ ಮೊದಲ ಮುತ್ತಿಗೆಯೇ ಎಷ್ಟು ಉಗ್ರಸ್ವರೂಪದ್ದಾಗಿತ್ತು ಎಂಬುದು ಅಲ್ಲಿನ ಸುಭೇದಾರ ಅಂದುಕೊಳ್ಳುವ "...ನಮ್ಮ ನಾಡವಳಗ ಹಿಂತಾವರು ಯಾರ್‍ಯಾರು ಬಂದಿದ್ದಿಲ್ಲ..." ಎಂಬ ಮಾತುಗಳಲ್ಲಿ ಕಂಡುಬರುತ್ತದೆ.

ಆಣಿಪ್ರಮಾಣಗಳು, ಅವುಗಳ ಬಗೆಗಿದ್ದ ಅಚಲ ನಂಬಿಕೆ ಮುಂತಾದವು ಜನಪದ ಬದುಕಿನಲ್ಲಿ ನೂರಾರು ವರ್ಷಗಳಿಂದಲೂ ಸ್ಥಾನಗಳಿಸಿಕೊಂಡು ಉಳಿದುಕೊಂಡು ಬಂದಿರುವುದನ್ನು "ಉಪ್ಪು ಗೊಬ್ಬರ ಮುಟ್ಟಿ, ಉರವು ದೀವಿಗಿ ಮುಂದ ಕುಂತು ಹೇಳತಾರೊ..." ಎಂಬ ವರ್ಣನೆಯಲ್ಲಿ ಕಾಣಬಹುದು. ಉಪ್ಪು, ಗೊಬ್ಬರ, ಉರಿಯುವ ದೀವಿಗೆ, ಶುದ್ಧ ಜನಪದ ಬದುಕಿನಲ್ಲಿ ಪಡೆದಿದ್ದ ಸ್ಥಾನವನ್ನೂ ಅವು ಇಂದಿಗೂ ಜೀವಂತವಾಗಿ ಉಳಿದಿರುವದನ್ನೂ ಕಂಡಾಗ ಅಂಥ ಬದುಕಿನ ಅಚಲ ಸಾಮರ್ಥ್ಯವನ್ನೂ ಶುಚಿತ್ವವನ್ನೂ ಎಂಥವರೂ ಮೆಚ್ಚಲೇಬೇಕಾಗುತ್ತದೆ.

ನಮ್ಮ ಜನ ತಮ್ಮ ಪ್ರೀತಿಗೆ ಅಭಿಮಾನಕ್ಕೆ ಪಾತ್ರವಾದ ಎಲ್ಲಕ್ಕೂ ದೈವತ್ವವನ್ನು ಆರೋಪಿಸುವ ಪದ್ಧತಿ ಇಂದು ನೆನ್ನೆಯದಲ್ಲ. ವ್ಯವಸಾಯದ ಉಪಕರಣಗಳು, ನೀರು, ಭೂಮಿ, ಇತ್ಯಾದಿಗಳೂ ಪರಮಹಂಸ, ವಿವೇಕಾನಂದ, ಮಹಾತ್ಮಗಾಂಧಿ ಮುಂತಾದವರೂ ಒಳಗಾದಂತೆ ರಾಯಣ್ಣನೂ ದೈವತ್ವದ ಆರೋಪಕ್ಕೊಳಗಾಗುತ್ತಾನೆ. ಇಲ್ಲಿ ಬರುವ ದೈವೀಕಲ್ಪನೆ ಅದ್ಭುತವಾದುದು. ಪುತ್ರ ಸಂತಾನ ಇತ್ಯಾದಿಗಳನ್ನು ಕುರಿತ ನಂಬಿಕೆಗಳನ್ನು ಗಮನಿಸಿದಾಗ ಅತಿರೇಕ

ಎನ್ನಿಸಲೂಬಹುದು. ಆದರೆ ಜನಪದ ಬದುಕಿನಲ್ಲಿ ನಂಬಿಕೆಯು ಪಡೆದಿರುವ ಸ್ಥಾನವು ಉಚ್ಚಮಟ್ಟದ್ದು.

ರಾಯಣ್ಣನ ಒಳ್ಳೆಯತನವೇ ಅವನಿಗೆ ಮುಳುವಾಯಿತು ಎಂಬ ಅಂಶವನ್ನು ಲಾವಣಿಕಾರನು ಬಹಳ ಜಾಣ್ಮೆಯಿಂದ ವರ್ಣಿಸುತ್ತಾನೆ. "ಇಸವಾಸಕ ಬಿದ್ದ ಆದ ಮಳ್ಳಾ" ಎನ್ನುವಲ್ಲಿ, "ಕತ್ತಿ ಇಟ್ಟ ಕಬರ ಬಿಟ್ಟ" ಎನ್ನುವಲ್ಲಿ, ಆ ಜಾಣ್ಮೆ ವ್ಯಕ್ತವಾಗುತ್ತದೆ.

೩

"ಆದಾಯ ತೆರಿಗೆ" ಎಂಬ ಒಂದು ಲಾವಣಿಯಲ್ಲಿ ಇತರ ಲಾವಣಿಗಳಂತೆ ಹೋರಾಟದ ಚಿತ್ರವಿಲ್ಲದಿದ್ದರೂ ಬ್ರಿಟಿಷರು ರೂಪಿಸಿದ್ದಂಥ ಒಂದು ಕಾನೂನನ್ನು ಕುರಿತಾದುದರಿಂದ ಐತಿಹಾಸಿಕ ಲಾವಣಿಗಳ ಗುಂಪಿನಲ್ಲಿ ಸೇರ್ಪಡೆಯಾಗಿದೆ. ಇದರಲ್ಲಿ ಬ್ರಿಟಿಷರು ೧೮೬೦ರ ಜುಲೈ ೩೧ರಿಂದ ಜಾರಿಗೆ ತಂದ ೩೨ನೆಯ ಕಾಯಿದೆ ಹಾಗೂ ಅದರಿಂದುಂಟಾದ ಪರಿಣಾಮಗಳಿವೆ. ಈ ಕಾಯಿದೆಯ ಪ್ರಕಾರ ಆಸ್ತಿ, ಉದ್ಯೋಗ, ವ್ಯಾಪಾರ ಮತ್ತು ಕಚೇರಿಗಳ ಆದಾಯಗಳ ಮೇಲೆ ಹಾಕಿದ ಸುಂಕಗಳು ಅಧಿಕವಾಗುತ್ತವೆ. ಯಾವಾಗಲೂ ಗಮನಿಸಲ್ಪಡುತ್ತಿದ್ದ ಆದಾಯ ಮತ್ತು ಸನದು ತೆರಿಗೆಗಳ ಬಗ್ಗೆ ಇದ್ದ ಅಪಖ್ಯಾತಿ ಮತ್ತು ಸಂಶಯಗಳನ್ನು ಕುರಿತು ಈ ಹಾಡು ಉದ್ದಕ್ಕೂ ಸರಳವಾಗಿ ವಿವರಿಸುತ್ತಾ ಹೋಗುತ್ತದೆ. ಅದರಲ್ಲೂ ಭೂಕಂದಾಯವನ್ನು ತೆರುತ್ತಿದ್ದ ಬೇಸಾಯಗಾರರು ಮುಖ್ಯರು. ಈ ತರಹದ ನೇರ ತೆರಿಗೆ ಅವರಿಗೆ ಹೊರೆಯಾಗಲಿ ಎಂದಾಗಲೀ ಅಪರೂಪದ ಸಂದರ್ಭಗಳಲ್ಲಿ ರಕ್ಷಣೆಯಾಗಲಿ ಎಂದಾಗಲಿ ಅಲ್ಲ. ಆದರೆ ಹೆಚ್ಚುಕಡಿಮೆ ಅಂಥ ತೆರಿಗೆಗಳು ಅವರ ಮೇಲೆಯೇ

ಹೆಚ್ಚಾಗಿ ಬೀಳುತ್ತಿದ್ದುದರಿಂದ ಅದರಿಂಟುಂಟಾಗುತ್ತಿದ್ದ ಪರಿಣಾಮಗಳನ್ನು ತಡೆಯುವಂಥ ಇಂಗ್ಲೀಷ್ ಜಿಲ್ಲಾಧಿಕಾರಿಗಳ ಎಲ್ಲ ಪ್ರಯತ್ನಗಳೂ ಎರೋಧಿಸಲ್ಪಡುತ್ತಿದ್ದುವು. ಬೇಸಾಯದಿಂದ ಆದಾಯ ಇಲ್ಲದಿದ್ದರೂ ತೆರಿಗೆ ವಿಧಿಸಲ್ಪಡುತ್ತಿತ್ತು.

ಬ್ರಿಟಿಷರ ದಬ್ಬಾಳಿಕೆಯ ಮತ್ತೊಂದು ಕ್ರೂರ ನೋಟ ಈ 'ಆದಾಯ ತೆರಿಗೆ' ಲಾವಣಿಯಲ್ಲಿದೆ. ಗೌಡ ಊರ ಮುಂದೆ ಕುಣಿದರೆ ಕುಳುವಾಡಿ ಕೋಣೆ ಮುಂದೆ ಕುಣಿದ ಎಂಬಂತೆ ಬ್ರಿಟಿಷರು ಭೂಮಿಯನ್ನು ದೋಚಿದುದಲ್ಲದೆ ಆ ಭೂಮಿಯಿಂದ ನಮ್ಮ ಜನ ಕಷ್ಟಪಟ್ಟು ತೆಗೆಯುತ್ತಿದ್ದ ಸಂಪತ್ತನ್ನು ಅಧಿಕೃತವಾಗಿ ಪಡೆಯಲು ಅಧಿಕಾರಿಗಳನ್ನು ನೇಮಿಸಿದರೆ, ಆ ಅಧಿಕಾರಿಗಳು ಅನ್ನ ಇಕ್ಕಿದ ಮನೆಗೆ ಕನ್ನ ಇಕ್ಕುವ ಕೆಲಸವನ್ನು ಪರೋಕ್ಷವಾಗಿ ಕೈಗೊಳ್ಳುತ್ತಾರೆ. ರಸ್ತೆ ಕಾಲುವೆಗಳನ್ನು ರಿಪೇರಿಮಾಡಿಸಿ ನಮಗೆ ಉಪಕಾರ ಮಾಡುವವರಂತೆ ಸೋಗುಹಾಕಿದ ಆ ಅಧಿಕಾರಿಗಳು ತೆರಿಗೆ ವಸೂಲಿಯ ಕೆಲಸಕ್ಕಿಂತ ತಮ್ಮ ಗೋಣಿಯನ್ನು ತುಂಬಿಕೊಳ್ಳುವ ಯತ್ನದಲ್ಲಿ ತೊಡಗುತ್ತಾರೆ. ಕಾನೂನಿನಂತೆ ತೆರಿಗೆಯ ವಸೂಲಿಯನ್ನೂ ಸರ್ಕಾರಕ್ಕೆ ತೋರಿಸಬೇಕು, ತಮ್ಮ ಜೇಬುಗಳನ್ನೂ ತುಂಬಿಕೊಳ್ಳಬೇಕು. ಹೀಗೆ ಒಂದರಮೇಲೊಂದು ಹೊಡೆತ ತಿನ್ನುವ ಬಡವರ ಜೀವನ ದುರ್ಭರವಾಗುತ್ತದೆ. ಎಷ್ಟೋ ಜನ ತಮ್ಮ ಜೀವನಾಧಾರವಾಗಿದ್ದ ನೂಲುವ ರಾಟೆಯನ್ನು ಕೂಡ ಮಾರಿಕೊಳ್ಳಬೇಕಾಗುತ್ತದೆ. ಏನೂ ಇಲ್ಲದವರು ಸೌದೆ ಸೀಳಿ ಮಾರಿ ತಮ್ಮ ಪಾಲಿನ ತೆರಿಗೆಯ ಹೊರೆಯನ್ನು ಇಳಿಸಿಕೊಳ್ಳಬೇಕಾಗುತ್ತದೆ. ಇಷ್ಟೆಲ್ಲ ಆಗುವುದಕ್ಕೆ ಸಹಜವಾಗಿಯೇ ವಿಳಂಬವಾದಾಗ ಸರಕಾರದ ದಾಹ ಮತ್ತಷ್ಟು ಹೆಚ್ಚಿ ಒತ್ತಾಯ ಅತಿಯಾಗುತ್ತದೆ.

ಪ್ರಪಂಚದ ಬಹುಭಾಗದಲ್ಲೆಲ್ಲ ಜಯಭೇರಿ ಹೊಡೆದ ಆ ಬ್ರಿಟಿಷ್ ಆಡಳಿತದಲ್ಲೂ ಲಂಚಕೋರ ಅಧಿಕಾರಿಗಳಿದ್ದರು ಎಂಬ ಸಂಗತಿ, ದೊರಕಲಿರುವ

ಶಿಕ್ಷೆಯನ್ನು ತುಚ್ಛವಾಗಿ ಕಂಡು ಸೆಟೆದುನಿಂತ ಮುಸಲ್ಮಾನರು ಮತ್ತು ಅವರ ಒಗ್ಗಟ್ಟು, ಈ ಲಾವಣಿಯಲ್ಲಿ ಕಂಡುಬರುವ ಎರಡು ಮುಖ್ಯ ಅಂಶಗಳು. ಉಳಿದ ಅಂಶಗಳು ಈಗ ಉಳಿದಿಲ್ಲ ಎಂದಲ್ಲ ಅಥವಾ ಮುಖ್ಯವಲ್ಲ ಎಂದಲ್ಲ. ತೆರಿಗೆ ವಸೂಲಿಗೆಂದು ಬಂದ ಬ್ರಿಟಿಷ್ ಅಧಿಕಾರಿಗಳು ಮೊದಲು ತಮ್ಮ ಗೋಣಿಯನ್ನು ತುಂಬುಕೊಳ್ಳುವುದರ ಮೂಲಕ ಕೆಲಸ ಪ್ರಾರಂಭಿಸುವ ಚಿತ್ರದ ಸಾರ್ಥಕ್ಯವು ಜನರು ಮತ್ತೊಂದು ರಾಜ್ಯಕ್ಕೆ ವಲಸೆಹೋಗಲು ನಿರ್ಧರಿಸುವದರಲ್ಲಿದೆ. ಮೂರು ಮತ್ತು ನಾಲ್ಕನೆಯ ನುಡಿಗಳ ಕಡೆಯಲ್ಲಿ ಪ್ರಾಸಬದ್ಧವಾಗಿ ಸಹಜವೆಂಬಂತೆ ನಿರರ್ಗಳವಾಗಿ ಉರ್ದೂವಿನಲ್ಲೇ ಇರುವ ಪದ್ಯಗಳು ಮುಸಲ್ಮಾನರ ಮತ್ತು ಅವರ ಭಾಷೆಯ ಪ್ರಭಾವವನ್ನು ಪ್ರತಿನಿಧಿಸುತತವೆ.

೪

'ಹಲಗಲಿಯ ಬೇಡರು' ಎಂಬ ಇನ್ನೊಂದು ಲಾವಣಿಯು ಅನೇಕ ದೃಷ್ಟಿಗಳಿಂದ ವಿಶಿಷ್ಟವಾದುದು. ೧೮೫೭ರ ಸಿಪಾಯಿ ದಂಗೆಯನ್ನು ಮೊಟ್ಟಮೊದಲ ಸ್ವಾತಂತ್ರ್ಯ ಸಂಗ್ರಾಮವೆಂದು ಅರ್ಥೈಸಲಾಗಿದೆ. ಅದಾದ ಮೇಲೆ ನಡೆದ ಬ್ರಿಟಿಷರ ವಿರುದ್ಧದ ಹೋರಾಟವೇ ಹಲಗಲಿಯ ಬೇಡರ ಪ್ರತಿಭಟನೆ. ಸಿಪಾಯಿ ದಂಗೆಯ ಪರಿಣಾಮವೋ ಎಂಬಂತೆ ಅದೇ ವರ್ಷ ಬ್ರಿಟಿಷ್ ಆಳ್ವಿಕೆಯಿಮದ ಹೊಸದೊಂದು ಕಾಯಿದೆ ಜಾರಿಗೆಬಂದಿತು. ಅದು 'ನಿಶ್ಶಸ್ತ್ರೀಕರಣ ಕಾಯಿದೆ". ಜನ ಹೊಂದಿದ್ದ ಪ್ರತಿಯೊಂದು ತರಹದ ಎಲ್ಲ ಆಯುಧಗಳನ್ನೂ ಮುಟ್ಟುಗೋಲು ಹಾಕಿಕೊಳ್ಳಲು ಕುಂಪಣಿ ಸರ್ಕಾರ ಜಾರಿಗೆ ತಂದದ್ದು. ಸ್ವತಃ ಮುಧೋಳ ಸಂಸ್ಥಾನವೇ ಅದರ ವಿರುದ್ಧ ಬಾಯಿ ಬಿಡದಿರುವಾಗ, ಅದೇ ಸಂಸ್ಥಾನಕ್ಕೆ ಸೇರಿದ್ದ ಹಲಗಲಿ ಎಂಬ ಒಂದು ಸಣ್ಣ ಹಳ್ಳಿ ಆ ಕಾಯಿದೆಯ ವಿರುದ್ಧ ದನಿಯೆತ್ತಿತ್ತು.

ಯಾಕೆಂದರೆ, ಆ ಹಳ್ಳಿಯಲ್ಲಿ ಇದ್ದವರೆಲ್ಲ ಬೇಡರು. ಬೇಟೆಯಿಂದಲೇ ಜೀವನ ನಿರ್ವಹಿಸುತ್ತಿದ್ದವರು. ಬೇಟೆಯಾಡಲು ಆಯುಧಗಳು ಅನಿವಾರ್ಯವಾಗಿದ್ದವು. ಹೊಸ ಕಾಯಿದೆಯಿಂದ ಅವರಿಗೆ ಆಘಾತವಾಗಿತ್ತು. ಅವರು ಆಯುಧಗಳನ್ನು ಒಪ್ಪಿಸಲು ನಿರಾಕರಿಸತೊಡಗಿದಾಗ ಅವರನ್ನು ಒಲಿಸಿಕೊಳ್ಳಲು ಸರ್ಕಾರ ಹಲವು ಬಗೆಯ ಸಂಧಾನಗಳನ್ನು ನಡೆಸಿತು. ಯಾವುದಕ್ಕೂ ಬೇಡರು ಬಗ್ಗದಿದ್ದಾಗ ದಾಳಿ ಮಾಡಿಯಾದರೂ ಅವರಲ್ಲಿದ್ದ ಆಯುಧಗಳನ್ನು ಕಿತ್ತುಕೊಳ್ಳಲು ಯತ್ನಿಸಿತು. ಬ್ರಿಟಿಷ್ ಸೈನ್ಯದ ದಾಳಿಯನ್ನು ಎದುರಿಸಿದರು ಬೇಡರು. ಬೇಡರ ಪ್ರತಿಭಟನೆ ಎಷ್ಟು ಸಮರ್ಥವಾಗಿತ್ತೆಂದರೆ, ಬ್ರಿಟಿಷ್ ಸೈನ್ಯವು ಪಲಾಯನ ಮಾಡುವಷ್ಟು. ಇವರನ್ನು ಸೋಲಿಸುವುದು ಕಷ್ಟವೆಂದರಿತ ಬ್ರಿಟಿಷ್ ಅಧಿಕಾರಿಗಳು ಒಂದು ದಿನ ನಡುರಾತ್ರಿಯಲ್ಲಿ ಹಲಗಲಿಯನ್ನು ಮುತ್ತಿದರು. ಕೆಲವರನ್ನು ಕೊಂದರು, ಕೆಲವರನ್ನು ಸೆರೆಹಿಡಿದರು, ಕೆಲವರು ತಪ್ಪಿಸಿಕೊಂಡು ಕತ್ತಲೆಯಲ್ಲಿ ಮಾಯವಾದರು. ಇದು 'ಹಲಗಲಿಯ ಬೇಡರು' ಎಂಬ ಲಾವಣಿಯಲ್ಲಿ ಕಾಣುವ ಚಿತ್ರ.

ಕಳ್ಳನ ಮನಸ್ಸು ಹುಳ್ಳಹುಳ್ಳಗೆ ಎಂಬಂತೆ ಆಯುಧದಿಂದಲೇ ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸುತ್ತ ಬಂದ ಬ್ರಿಟಿಷರಿಗೆ ಗೊತ್ತು 'ಆಯುಧ' ಏನೆಂಬುದು. ಜನರ ಮನಸ್ಸನ್ನು ಗೆದ್ದು ಒಡೆಯರಾಗದೆ ಹೋಗಿದ್ದುದರಿಂದ ಒಳ್ಳೆಯ ಮಾತಿನಲ್ಲಿ ಅವನ್ನು ಸಂಗ್ರಹಿಸುವುದು ಅಸಾಧ್ಯ ಎಂಬ ಸತ್ಯಪ್ರಜ್ಞೆ ಅವರಲ್ಲಿದ್ದುದರಿಂದಲೇ ಕಾಯಿದೆಯನ್ನು ಮಾಡಿಯಾದರೂ ಸಂಗ್ರಹಿಸಲು ಮುಂದಾಗಬೇಕಾಯಿತು. ಕಾಯಿದೆಗೂ ಜನ ಜಗ್ಗದೆ ಹೋದಾಗ ಬೇರೆ ದಾರಿ ಹುಡುಕಬೇಕಾಯಿತು.

ಬ್ರಿಟಿಷರ ಮತ್ತೊಂದು ಬಗೆಯ ಕುತಂತ್ರ ಈ ಘಟ್ಟದಲ್ಲಿ ವ್ಯಕ್ತವಾಗುತ್ತದೆ. ಉಪಾಯದಿಂದ ಸಂಗ್ರಹಿಸಲು ಮೊದಲುಮಾಡುತ್ತಾರೆ. ಆಯುಧಗಳನ್ನು

ಎಲ್ಲಿ ಅವಿಸಿಟ್ಟಿದ್ದಾರೆಂಬ ವಿಷಯುವನ್ನು ಯಾರೊಬ್ಬರೂ ಹೇಳದೆ ಹೋದುದರಿಂದ ಒಬ್ಬೊಬ್ಬರನ್ನಾಗಿ ಕರೆದು ವಿಷಚಿತ್ತಿಯೋ ಬೆದರಿಸಿಯೋ ಬೆದರಿಸಿಯೋ – ಒಟ್ಟಿನಲ್ಲಿ ಭೇದೋಪಾಯದಿಂದ ವಿಷಯುವನ್ನು ತಿಳಿದುಕೊಳ್ಳಲು ತೊಡಗುತ್ತಾರೆ. ಅಷ್ಟು ಒಗ್ಗಟ್ಟಿನಿಂದ ಆಯುಧಗಳನ್ನು ಹುಗಿದಿಟ್ಟವರೂ ಒಬ್ಬರ ಮೇಲೊಬ್ಬರು ಚಾಡಿಹೇಳಿದರು ಎಂಬ ಸಂಗತಿಯು ಕುತಂತ್ರದ ಪ್ರಖರತೆಯನ್ನು ಬಿಂಬಿಸುತ್ತದೆ.

ಈ ಲಾವಣಿಯಲ್ಲಿ ಬರುವ ಹೋಲಿಕೆಗಳೂ ಅಷ್ಟೇ ತೀವ್ರತರ ಪರಿಣಾಮವನ್ನುಂಟು ಮಾಡುತ್ತವೆ. 'ಹಲ್ಲ ಕಿತ್ತಿದಾ ಹಾಂವಿನ ಪರಿಯು....', 'ಸತ್ತ ಹೆಣಕ ಶೃಂಗಾರ ಮಾಡಿದ ಪರಿ....' ಮುಂತಾದವು ಈಗ ಕ್ಲೀಷೆ ಎನ್ನಿಸಿದರೂ 'ಮಗ್ಗಲದಾಗಿನ ಹೇಣತಿ ಕೊಟ್ಟಾಂಗ...' ಎನ್ನುವಲ್ಲಿ ಎದ್ದುಕಾಣುವ ಅವರ ಆ ಗಡುಸು ಗಂಡಸುತನ ಎಂಥ ಹೇಡಿಯನ್ನೂ ಬಡಿದೆಬ್ಬಿಸುತ್ತದೆ. 'ಕಾರಕೂನನ ಕಪಾಳಕ ಬಡದರ ಶಿಪಾಯಿ ನೆಲಕ ಬಿತ್ತು' ಎಂಬ ವರ್ಣನೆ ಅಷ್ಟೇ ಗಡುಸಾಗಿಯೂ ಅದಕ್ಕಿಂತ ಹೆ[illegible] ಅರ್ಥಪೂರ್ಣವಾಗಿಯೂ ಇದೆ. ಒಂದೇ ಏಟಿಗೆ ಒಬ್ಬ ಕೆಳಕ್ಕೆ ಬಿದ್ದು[illegible]ನ್ನು ಕಂಡ ಸಿಪಾಯಿಯು ಹೆದರಿ ಮೂರ್ಛೆಹೋಗಿ ನೆಲಕ್ಕೆ ಬಿದ್ದ ಎಂಬ ಧ್ವನಿಯನ್ನೂ ಒಳಗೊಂಡಿದೆ. ಹೀಗೆ ಈ ಲಾವಣಿ [illegible]ತಿಹಾಸದೊಂದಿಗೆ ನಮ್ಮ ಮನಸ್ಸನ್ನು ಕಲಕುವಂಥ ಕಥಾವಸ್ತುವನ್ನೂ ಒಳಗೊಂಡಿದೆ.

೫

'ಸಂಗ್ಯನ ಅಪರಾಧ ಮತ್ತು ಸಾವು' ಎಂಬ ಲಾವಣಿಯು ಬೇರೊಂದು ಕಾರಣಕ್ಕಾಗಿ ಐತಿಹಾಸಿಕ ಮಹತ್ವವನ್ನು ಪಡೆದುಕೊಳ್ಳುತ್ತದೆ. ಈ ಲಾವಣಿಯ

ಪ್ರಾರಂಭದಲ್ಲಿ, ಪ್ರತಿ ಲಾವಣಿಯ ಮೊದಲಲ್ಲೂ ನೀಡುವಂತೆ, ನಡೆದ ಘಟನೆಗಳನ್ನು ಆಧರಿಸಿದ ಕೆಲವು ಸಂಗತಿಗಳನ್ನು ಫ್ಲೀಟರು ಹೇಳಿದ್ದಾರೆ. ಫ್ಲೀಟರ ಪ್ರಕಾರ ಇದು ಬೆಳಗಾವಿ ಜಿಲ್ಲೆಯ ಬಹಳ ಅಚ್ಚುಮೆಚ್ಚಿನ ಲಾವಣಿ. ಅನೇಕ ಬಡ ಬೇಸಾಯಗಾರರ ಮನೆಗಳಲ್ಲಿ ಸತತವಾಗಿ ಹಾಡಿಸಿಕೊಳ್ಳುತ್ತಿದ್ದ ಜನಪ್ರಿಯ ಲಾವಣಿ. ಯಾಕೆಂದರೆ, ಈ ಲಾವಣಿಯ ನಾಯಕ ಸಂಗ್ಯನು ಕೂಡ ಒಬ್ಬ ಬಡ ಬೇಸಾಯಗಾರ.

ಬೈಲಹೊಂಗಲ ಎಂದು ಹೆಚ್ಚು ಬಳಕೆಯಲ್ಲಿರುವ ಹೊಂಗಲದಲ್ಲಿ ೧೮೬೩ರ ಅಕ್ಟೋಬರ್ ೧೨ರಂದು ನಡೆದ ಒಂದು ಕೊಲೆಯ ಆಧಾರದ ಮೇಲೆ ಈ ಹಾಡಿನ ಕ್ರಿಯೆ ಸಾಗುತ್ತದೆ. ಕೊಲೆಗೆ ಆಹುತಿಯಾಗುವವನು ಬಸಲಿಂಗಣ್ಣ ಎಂಬ ಲೇವಾದೇವಿ ವ್ಯವಹಾರದವನು. ಲಾವಣಿಯ ಮೊದಲನೆಯ ನುಡಿಯಲ್ಲಿ ಇವರ ವ್ಯಾಪಾರ ಮತ್ತು ವೈಯಕ್ತಿಕ ಅಭಿರುಚಿಗಳು ವಿವರಿಸಲ್ಪಟ್ಟಿವೆ. ಬಸಲಿಂಗಣ್ಣನ ಸಾಲಗಾರರಲ್ಲಿ ಸಂಗ್ಯನೂ ಒಬ್ಬ.

ಸಂಗ್ಯನು ತನಗೆ ಹಣದ ಅವಶ್ಯಕತೆ ಉಂಟಾದಾಗ ಬಸಲಿಂಗಣ್ಣನಿಂದ ಪಡೆದ ಸಾಲದ ಭದ್ರತೆಗಾಗಿ ತನ್ನ ಭೂಮಿಯನ್ನು ಒತ್ತೆಯಿಡುತ್ತಾನೆ. ಸಾಲವು ಸಕಾಲದಲ್ಲಿ ವಾಪಸು ಬರದೆ ಹೋದಾಗ ಬಸಲಿಂಗಣ್ಣನು ಸೌಂದತ್ತಿಯ ಕೆಳಗಿನ ನ್ಯಾಯಾಲಯದಲ್ಲಿ ವಾಜ್ಯನಡೆಸಿ ಸಂಗ್ಯನ ವಿರುದ್ಧವಾಗಿ ತೀರ್ಪು ಪಡೆದ. ಧಾರವಾಡದ ಜಿಲ್ಲಾ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಲು ಸಂಗ್ಯನಿಗೆ ಸಾಧ್ಯವಾಗಲಿಲ್ಲ. ಅವನ ಭೂಮಿ ಹರಾಜಿಗೆ ಬಂತು. ಮತ್ತೆ ಅದನ್ನು ಕೊಳ್ಳಲು ಸಂಗ್ಯ ಅಶಕ್ತನಾಗಿದ್ದ. ಭೂಮಿಯು ಬಸಲಿಂಗಣ್ಣನ ವಶಕ್ಕೆ ಬಂದಿತು. ಸಂಗ್ಯ ತನ್ನ ಸೋದರ ಪರ್ಸ್ಯನೊಂದಿಗೆ ಆಲೋಚನೆ ನಡೆಸಿ ಸೇಡು

ತೀರಿಸಿಕೊಳ್ಳಲು ಬಸಲಿಂಗಣ್ಣನನ್ನು ಕೊಲ್ಲುವ ನಿರ್ಧಾರ ಮಾಡಿದ. ಪರಿಣಾಮ ಸಂಗ್ಯನಿಗೆ ಮರಣದಂಡನೆ. ಇದಿಷ್ಟೂ ಫ್ಲೀಟರು ಲಾವಣಿಯ ಮೊದಲಲ್ಲಿ ಒದಗಿಸಿರುವ ವಾಸ್ತವ ಘಟನೆಗಳು.

ಫ್ಲೀಟರ ಲೇಖನವನ್ನು ಗಮನಿಸದೆ ಈ ಲಾವಣಿಯನ್ನು ಓದಿದರೆ ಇಲ್ಲಿ ಬರುವ ಪಾತ್ರಗಳ ನಡುವಿನ ಸಂಬಂಧಗಳು ಅರ್ಥವಾಗದೆ ಗೊಂದಲವಾಗುವ ಸಂಭವ ಉಂಟು. ಫ್ಲೀಟರು ಪ್ರತಿಯೊಂದು ಲಾವಣಿಯ ಮೊದಲಲ್ಲಿ ಕೊಡುವ ಲೇಖನಗಳಿಂದ ಆಗುವ ಪ್ರಯೋಜನಗಳಲ್ಲಿ ಇದೂ ಒಂದು. ಸಂಗ್ಯ ಪರ್ಸ್ಯ ಇಬ್ಬರೂ ತಪ್ಪಿಸಿಕೊಳ್ಳುವ ಪ್ರಯತ್ನಮಾಡಲಿಲ್ಲ ಎಂದು ಫ್ಲೀಟರು ಹೇಳುತ್ತಾರೆ. ಆದರೆ ಅವರು ಓಡಿಹೋದುದನ್ನೂ 'ಹಿಡಿಯಿರಿ ಹಿಡಿಯಿರಿ' ಎಂದು ಜನ ಕೂಗಿಕೊಂಡದ್ದನ್ನೂ ಲಾವಣಿಯೇ ಹೇಳುತ್ತದೆ. ಬಹುಶಃ ಅವರು ಗಾಬರಿಹೆಚ್ಚಿ ಓಡಹತ್ತಿರಬೇಕು. ಅವರು ತುಂಬ ಗಾಬರಿಯಾಗಿದ್ದರು ಎಂಬುದಕ್ಕೆ ಏನೂ ಅರಿಯದ ಹೂವಿನ ರಾಮ ಎಂಬುವವನನ್ನು ಸಿಕ್ಕಿಸಿದ್ದು ಒಂದು ನಿದರ್ಶನವಾಗಬಹುದು. ಸುಲಭವಾಗಿಯಂತೂ ಸಿಕ್ಕಿಬಿದ್ದದ್ದು ನಿಜ. ಆದ್ದರಿಂದ ತಪ್ಪಿಸಿಕೊಳ್ಳುವ ಹಂಚಿಕೆಯೇನೂ ಅವರಲ್ಲಿರಲಿಲ್ಲ ಎಂಬ ಫ್ಲೀಟರ ಅಭಿಪ್ರಾಯವನ್ನು ಮಾತ್ರ ಒಪ್ಪಬಹುದು. ಗಲ್ಲಿಗೆಹಾಕುವ ದಿನ ಸಂಗ್ಯನಿಗೆ ಹುಚ್ಚು ಹಿಡಿದಂತಾಗಿ ತನ್ನಷ್ಟಕ್ಕೆ ತಾನು ಬಳಬಳನೆ ಮಾತಾಡಿಕೊಳ್ಳುವ ದೃಶ್ಯವಂತೂ ಕರುಣಾಜನಕವಾಗಿದೆ. ಈ ಲಾವಣಿಯಲ್ಲಿ ಬ್ರಿಟಿಷರ ಪ್ರವೇಶವಿಲ್ಲ. ಬಡವರನ್ನು ಸುಲಿದು ತಿನ್ನುವ ಬಂಡವಾಳಷಾಹಿ ಜನ ಅವತ್ತೂ ಇದ್ದರು ಎಂಬ ಸಂಗತಿಯನ್ನು ಸಾರುತ್ತದೆ.

೬

'ಕಿತ್ತೂರು ಚನ್ನವ್ವನ ಸೊಸೆ' ಎಂಬುದು ಪ್ರಕಟಿತ ಐದು ಲಾವಣಿಗಳಲ್ಲಿ ಕೊನೆಯದು; ೧೮೯೦ರಲ್ಲಿ ಪ್ರಕಟವಾದದ್ದು. ಈ ಲಾವಣಿಯ ಮೊದಲಲ್ಲಿ ಫ್ಲೀಟ್ ಉಳಿದ ಲಾವಣಿಗಳಿಗಿಂತ ಹೆಚ್ಚು ದೀರ್ಘವಾದ ಐತಿಹಾಸಿಕ ವಾಸ್ತವಸಂಗತಿಗಳನ್ನು ನೀಡಿದ್ದಾರೆ. ಈ ಸಂಗತಿಗಳನ್ನು ಇನ್ನೊಬ್ಬ ಇತಿಹಾಸಕಾರ ಇ.ಡಬ್ಲ್ಯೂ.ವೆಸ್ಟ್ ಅವರಿಂದ ತೆಗೆದುಕೊಂಡಿದ್ದಾರೆ. ಕಿತ್ತೂರಿನ ದೊರೆ ಶಿವಲಿಂಗಪ್ಪ ರುದ್ರಸರ್ಜನ ಸಾವಿನ ಅನಂತರ ದತ್ತು ಸ್ವೀಕಾರದ ಹಲವು ಘಟ್ಟಗಳ ಸಂದರ್ಭಗಳನ್ನು ವೆಸ್ಟ್ ಅವರ ದಾಖಲೆಗಳಿಂದ ಎತ್ತಿಕೊಳ್ಳಲಾಗಿದೆ. ಧಾರವಾಡದ ಪ್ರಮುಖ ಕಲೆಕ್ಟರನಾದ ಥ್ಯಾಕರೆಯ ಪಾತ್ರವೇ ಇಲ್ಲಿ ಪ್ರಧಾನವಾಗಿದೆ. ಥ್ಯಾಕೆರೆಯು ಕಳಿಸಿದ ವರದಿಗಳು ಇನ್ನೂ ಅನಿರ್ಧಾರಿತ ಸ್ಥಿತಿಯಲ್ಲಿರುವಾಗಲೇ, ಕಿತ್ತೂರಿನಲ್ಲಿ ದಂಗೆ ಪ್ರಾರಂಭವಾಗಿರುವ, ಅದರಿಂದ ಅನೇಕ ಗಣ್ಯವ್ಯಕ್ತಿಗಳೂ ರಾಜಕೀಯ ಧುರೀಣರೂ ಸಾವನ್ನಪ್ಪಿರುವ, ವರ್ತಮಾನ ತಲಪಿದುದು ಸರ್ಕಾರಕ್ಕೊಂದು ಆಘಾತವೇ ಆಗುತ್ತದೆ. ೧೮೨೪ ಸೆಪ್ಟೆಂಬರ್‌ನಲ್ಲಿ ಶಿವಲಿಂಗ ರುದ್ರ ಸರ್ಜ ಸತ್ತಮೇಲೆ ಅಕ್ಟೋಬರ್ ೨೧ರಂದು ಈ ದಂಗೆ ಕಾಣಿಸಿಕೊಂಡ ಮೇಲೆ ಖಜಾನೆಯ ಮೇಲ್ವಿಚಾರಣೆಯಲ್ಲಿದ್ದ ಗತಿಸಿದ ದೇಸಾಯಿಯ ಸಿಪಾಯಿಗಳೇ ಇದಕ್ಕೆ ಕಾರಣವೆಂದೂ, ಅವರೆಲ್ಲರೂ ವಿಶಿಷ್ಟ ಲಕ್ಷಣಗಳನ್ನುಳ್ಳ ಅಜ್ಞಾತ ವ್ಯಕ್ತಿಯೊಬ್ಬನಿಂದ ಆಜ್ಞಾಪಿತರಾಗುತ್ತಿದ್ದಾರೆಂದೂ ಕಂಡುಕೊಂಡ ಥ್ಯಾಕರೆ ಖಜಾನೆಯ ಬಗ್ಗೆ ಭಯಭೀತನಾದ. ಆ ಅಜ್ಞಾತ ವ್ಯಕ್ತಿಯು ಸಂಗೊಳ್ಳಿ ರಾಯಣ್ಣನೇ ಆಗಿದ್ದುದು ವಾಸ್ತವವಾದರೂ ಈ ಅಂಶ ಇಲ್ಲಿ ಪ್ರಸ್ತಾಪವಾಗಿಲ್ಲ. ಸರ್ಕಾರೀ ಸಿಪಾಯಿಗಳನ್ನು ಪ್ರತಿಯೊಂದು ಹೆಬ್ಬಾಗಿಲಲ್ಲೂ ನಿಲ್ಲಿಸಿದ. ಖಜಾನೆಯ ಉಸ್ತುವಾರಿ ವಹಿಸಿದ್ದ

ಮುಖ್ಯಸ್ಥರೊಬ್ಬರಿಂದ ದಾಸ್ತಾನಿನ ಪ್ರಮಾಣಪತ್ರವನ್ನು ಅಪೇಕ್ಷಿಸಿದ. ಆದರೆ, ದೇಸಾಯಿ ಸತ್ತಮೇಲೆ ಸಕಲ ವಹಿವಾಟುಗಳನ್ನೂ ನೋಡಿಕೊಳ್ಳುತ್ತಿದ್ದ ಚನ್ನವ್ವನ ಅನುಮತಿ ಇಲ್ಲದೆ ಹಾಗೆ ಮಾಡಲು ಬರುವುದಿಲ್ಲ ಎಂಬ ಉತ್ತರ ಬಂದಿತು.

ಥ್ಯಾಕರೆಗೆ ಮುಂದೇನು ಮಾಡಬೇಕೆಂದು ಹೊಳೆಯಲಿಲ್ಲ. ಊರಿನ ಹೆಂಗಸರನ್ನೆಲ್ಲ ಕರೆದು ವಿಷಯವನ್ನು ವಿವರಿಸಬೇಕೆಂದು ಎಲ್ಲರಿಗೂ ಕರೆ ಕಳುಹಿಸಿದ. ಅವನನ್ನು ಕಾಣಲು ಎಲ್ಲರೂ ನಿರಾಕರಿಸಿದರು. ಹೋಗಲಿ, ಅವರವರ ಮನೆಗಳಿಗೇ ಹೋಗಿ ವಿಷಯ ಮುಟ್ಟಿಸೋಣವೆಂದರೆ ಜೊತೆಯಲ್ಲಿ ಬರಲು ಯಾವ ಸರದಾರನೂ ಒಪ್ಪಲಿಲ್ಲ. ತಮ್ಮ ತಮ್ಮ ಹಳ್ಳಿಗಳಲ್ಲಿ ಸೇವಕರು ಮತ್ತಿತರರು ಸೇರುತ್ತಿದ್ದಾರೆ ಎಂಬ ವರ್ತಮಾನವನ್ನು ಕೇಳಿದ ಮೇಲೆ ಮುನ್ನೆಚ್ಚರಿಕೆ ವಹಿಸಬೇಕೆನ್ನಿಸಿತು. ಕೂಡಲೇ ಹೆಬ್ಬಾಗಿಲುಗಳಿಗೆದುರಾಗಿ ನಿಲ್ಲಿಸಲು ಎರಡು ಫಿರಂಗಿಗಳು ಬೇಕೆಂದು ಬಂದೂಕು ಪಡೆಯ ನಾಯಕನಾಗಿದ್ದ ಕ್ಯಾಪ್ಟನ್ ಬ್ಲ್ಯಾಕ್‌ನನ್ನು ಕೇಳಿಕೊಂಡ.

ಬೆಳಗಿನಲ್ಲಿ, ತೋಪುಗಳ ಅಧಿಕಾರಿಯು ಕಾವಲುಪಡೆಯನ್ನು ಬದಲಾಯಿಸಬೇಕೆಂದು ಕೋಟೆಯ ಕಡೆಗೆ ಬಂದಾಗ ಅಲ್ಲಿ ಹೊರಬಾಗಿಲು ಮುಚ್ಚಿದ್ದುದನ್ನೂ ಒಳಗಿನ ಕೋಟೆಯು ಸಶಸ್ತ್ರ ಸೈನಿಕರಿಂದ ತುಂಬಿರುವುದನ್ನೂ ಕಂಡ. ಒಳಕ್ಕೆ ಹೋಗಲು ಅವಕಾಶ ಸಿಕ್ಕಲಿಲ್ಲ. ದೂರು ಥ್ಯಾಕರೆಗೆ ಹೋಯಿತು. ಥ್ಯಾಕರೆಯು ಹಲವು ಸಲ ನಿರೂಪಗಳನ್ನು ಕಳಿಸಿದರೂ ಒಳಗಿನವರು ಲಕ್ಷಿಸಲಿಲ್ಲ. ಥ್ಯಾಕರೆಯು ಇನ್ನೆರಡು ಫಿರಂಗಿಗಳನ್ನು ತರಿಸಿಕೊಂಡು, ಇಪ್ಪತ್ತು ನಿಮಿಷಗಳ ಗಡುವು ನೀಡಿ, ಅಷ್ಟರಲ್ಲಿ ಬಾಗಿಲು ತೆಗೆಯದಿದ್ದರೆ ಒಡೆದು ಒಳನುಗ್ಗಬೇಕೆಂಬ ತೀರ್ಮಾನಕ್ಕೆ ಬಂದ.

ಇಪ್ಪತ್ತು ನಿಮಿಷಗಳ ಗಡುವು ಮುಗಿಯುತ್ತಿದ್ದಂತೆ ಕ್ಯಾಪ್ಟನ್ ಬ್ಲ್ಯಾಕ್, ಕ್ಯಾಪ್ಟನ್ ಸೀವೆಲ್, ಫಿರಂಗಿ ಪಡೆಯ ಲೆಫ್ಟಿನೆಂಟ್ ಡೈಟನ್ ಮುಂತಾದವರು ಬಾಗಿಲನ್ನು ಒಡೆಯಲು ಅಣಿಯಾಗುತ್ತಿದ್ದಾಗ, ಕೋಟೆಯೊಳಗಿಂದ ಅಕಸ್ಮಾತ್ತಾಗಿ ಹೊರಬಿದ್ದ ಸೈನಿಕರು ಬ್ರಿಟಿಷ್ ಅಧಿಕಾರಿಗಳನ್ನು ಕೊಲ್ಲುವುದೂ ಬಂದೂಕುಗಳನ್ನು ವಶಪಡಿಸಿಕೊಳ್ಳುವುದೂ ಮುಂತಾದ ಕೃತ್ಯಗಳಲ್ಲಿ ತೊಡಗಿದರು. ಇಂಥ ಗಂಡಾಂತರ ಸಮಯದಲ್ಲಿ ಕುದುರೆಯನ್ನೇರಿ ಬಂದು ದಾಳಿಕೋರರನ್ನು ಅಡಗಿಸಲು ಯತ್ನಿಸಿದ ಥ್ಯಾಕರೆಯು ಗುಂಡೇಟಿನಿಂದ ಕೆಳಗೆ ಬಿದ್ದ. ಅವನನ್ನು ತುಂಡುತುಂಡಾಗಿ ಕತ್ತರಿಸಿದರು. ಬ್ರಿಟಿಷ್ ತುಕಡಿಯ ಅವಶೇಷವೂ ಎದುರಿಸಲ್ಪಟ್ಟು ತುಂಡುತುಂಡಾಯಿತು. ರಾಜಕೀಯ ಧುರೀಣರ ಸಹಾಯಕರಾದ ಮೆಸರ್ಸ್ ಸ್ಟೀವನ್‌ಸನ್ ಮತ್ತು ಎಲ್ಲಿಯಟ್ಟ್ ಎಂಬುವರು ಒಂದು ಮನೆಯಲ್ಲಿ ತಲೆಮರೆಸಿಕೊಂಡು, ಅನಂತರ ಸ್ಥಳೀಯ ಅಧಿಕಾರಿಗಳ ನಿರ್ದೇಶನದಂತೆ ಸಿಪಾಯಿಗಳಿಂದ ಬಂಧಿತರಾದರು.

ಇದರ ಪರಿಣಾಮ ಏನಾಯಿತೆಂಬುದು ಸರ್ವವಿದಿತ ಸಂಗತಿ. ಕಿತ್ತೂರು ಕಡೆಗೆ ಬ್ರಿಟಿಷರ ವಶವಾಯಿತು. ರಾಜ್ಯ ಎಂಬ ಹೆಸರಿನಲ್ಲಿ ಒಗ್ಗಟ್ಟಿನಿಂದಿದ್ದ ಕಿತ್ತೂರನ್ನ, ಕಿತ್ತೂರು, ಸಂಪಗಾಂವ್ ಮತ್ತು ಬೀಡಿ ಎಂಬ ಮೂರು ತಾಲ್ಲೂಕುಗಳನ್ನಾಗಿ ವಿಭಜಿಸಲಾಯಿತು.

ಹೀಗೆ ಫ್ಲೀಟ್ ಅವರು ವೆಸ್ಟ್ ಅವರಿಂದ ಚಾರಿತ್ರಿಕ ಅಂಶಗಳನ್ನು ಪಡೆದು ಲಾವಣಿಯ ಪ್ರಾರಂಭದಲ್ಲಿ ನೀಡಿದ್ದಾರೆ. 'ಮೇಲೆ ವಿವರಿಸಿದ ಚಾರಿತ್ರಿಕ ಅಂಶಗಳನ್ನು ಸ್ವಲ್ಪಮಟ್ಟಿಗೆ ಒಳಗೊಂಡಿದ್ದರೂ ಈ ಹಾಡು ತನ್ನಷ್ಟಕ್ಕೆ ತಾನು ಲಾವಣಿಯಾಗಿ ಪರಿಣಮಿಸಿದೆ' ಎಂದೂ ಹೇಳುತ್ತಾರೆ.

ಕನ್ನಡದ ನೆಲದಲ್ಲಿ ಬ್ರಿಟಿಷರ ಆಳ್ವಿಕೆಯ ಕಡೆಯ ಹಂತ ಕಿತ್ತೂರಿನ ಆಕ್ರಮಣ. ಕಿತ್ತೂರಿನ ವೈಭವವನ್ನು ಸಾರುವದರೊಂದಿಗೇ ಆ ವೈಭವದ ಕಡೆಯ ಹೆಜ್ಜೆಯಾದ ಈರವ್ವನ ಅಂತ್ಯವನ್ನೂ ಈ ಲಾವಣಿಯು ಅದ್ಭುತವಾಗಿ ಚಿತ್ರಿಸುತ್ತದೆ. ಆನೆ ಕುದುರೆ ಕಾಲಾಳುಗಳ ಬೃಹತ್ ಸೈನ್ಯವನ್ನೂ ಅಲ್ಲಿನ ರಾಜಮನೆತನದ ಒಡವೆ ವಸ್ತ್ರಗಳ ಬೃಹತ್ತನ್ನೂ ವರ್ಣಿಸುವುದರಲ್ಲಿ ಕಾಣುವ ಯಶಸ್ಸನ್ನೇ ಈರವ್ವನ ಕಡೆಯ ದಿನಗಳನ್ನು ವರ್ಣಿಸುವುದರಲ್ಲಿಯೂ ಕಾಣಬಹುದು. 'ಸಂಗ್ಯನ ಅಪರಾಧ ಮತ್ತು ಸಾವು' ಬೆಳಗಾವಿ ಜಿಲ್ಲೆಯ ಅಚ್ಚುಮೆಚ್ಚಿನ ಲಾವಣಿಯೆಂದು ಫ್ಲೀಟ್ ಅವರು ಹೇಳಿದ್ದರೂ, ಪ್ರಸ್ತುತ ಲಾವಣಿಯಲ್ಲಿ ಬರುವ ಅತ್ಯದ್ಭುತ ವರ್ಣನೆಗಳನ್ನೂ ಕರುಳುಮಿಡಿಯುವ ಸನ್ನಿವೇಶಗಳನ್ನೂ ಕಂಡಾಗ ಅದಕ್ಕಿಂತ ಇದೇ ಹೆಚ್ಚು ಪರಿಣಾಮಕಾರಿಯಾದ ಲಾವಣಿಯೆನ್ನಿಸಿಕೊಂಡಿದ್ದೀತು ಎನ್ನಿಸದಿರದು.

ಕಿತ್ತೂರ ದೇಸಾಯಿಯವರ ಮನೆತನವು ಜನರ ಮನಸ್ಸನ್ನೂ ಅಭಿಮಾನವನ್ನೂ ಸೂರೆಗೊಂಡಿದ್ದ ರೀತಿಯನ್ನು ಇಲ್ಲಿನ ಒಂದು ವರ್ಣನೆಯಿಂದ ತಿಳಿಯಬಹುದು. ಈ ವರ್ಣನೆಯು ಬಹುಶಃ ಲಾವಣಿಕಾರನ ವೈಯಕ್ತಿಕ ಅಭಿಮಾನವಿರಬಹುದು ಎನ್ನಿಸಲು ಆಧಾರಗಳಿಲ್ಲ. ಈ ಸಂದರ್ಭವನ್ನು ನೋಡಿ : ಈರವ್ವ ಸೆರೆಸಿಕ್ಕಿ ಕಾಯವನ್ನು ತೊರೆಯಬೇಕೆಂಬ ಉದ್ದೇಶದಿಂದ ಅನ್ನ ನೀರು ಬಿಟ್ಟುಬಿಟ್ಟಮೇಲೂ ನವಲಗುಂದದ ಕಾಡಸಿದ್ದನ ಬಳಿಗೆ ಹೋಗಿ ಮಿಂದು ಜಂಗಮ ತೀರ್ಥವನ್ನು ಪಡೆದು ಅಂಗದ ಮೇಲಿನ ಸ್ಮರಣೆಯನ್ನು ಮರೆತು ಲಿಂಗದ ಮೇಲೆ ಧ್ಯಾನ ಇಡುವುದೂ ಅಲ್ಲಿಂದ ಮರಳಿ ಧಾರವಾಡಕ್ಕೆ ಬರುವುದೂ – ಕಡೆಯ ಕಾಲದಲ್ಲಿ ಇವೆಲ್ಲ ಸರಿ ಎನ್ನಿಸಿದರೂ, ತಕ್ಕಡಿಯ ತುಂಬ ಬಂಗಾರ ತರಿಸುವುದೂ ತೂಕಮಾಡಿ

ದಾನಕೊಡುವುದೂ ವಿಚಿತ್ರವಾಗಿ ಕಾಣುತ್ತದೆ. ಸೆರೆಸಿಕ್ಕ ಮೇಲೆ ಇವೆಲ್ಲ ಅವಳಿಗೆ ಎಲ್ಲಿ ದೊರೆತುವು? ಸರ್ವಸ್ವವೂ ತಮ್ಮೊಂದಿಗೇ ದೋಚಲ್ಪಟ್ಟಿರುವಾಗ ಇವೆಲ್ಲ ಸಾಧ್ಯವೇ? – ಎಂಬ ಸಂಶಯ ಸಹಜವಾಗಿಯೇ ಉಂಟಾಗುತ್ತದೆ. ಇದಕ್ಕಿಂತ ಹೆಚ್ಚಾಗಿ, ಈರವ್ವನನ್ನು ಸೆರೆಹಿಡಿದು ತರುವಾಗ ರಾಯನಾಯಕ ಬಂದಾನು ಎಂಬ ಭಯದಿಂದ ಬಿಚ್ಚುಗತ್ತಿಯ ಪಹರೆಯನ್ನು ಅಣಿಮಾಡಿದವರು ಧಾರವಾಡದಿಂದ ನವಲಗುಂದದ ತನಕ ಹೋಗಲು ಈರವ್ವನನ್ನು ಹೇಗೆ ಬಿಟ್ಟರು? ಎಂಬ ಸಂಶಯ ಪ್ರಬಲವಾಗಿ ಕಾಡುತ್ತದೆ. ಕಿತ್ತೂರ ದೊರೆಗಳ ಮೇಲೆ, ಅವರ ರಾಣೀವಾಸದ ಮೇಲೆ, ಜನರಲ್ಲಿದ್ದ ಅಭಿಮಾನವನ್ನೂ ತಮ್ಮ ಪ್ರಜೆಗಳ ಮೇಲೆ ದೊರೆಮನೆಯವರು ಇಟ್ಟಿದ್ದ ವಾತ್ಸಲ್ಯವನ್ನೂ ಮೆರೆದು ತಾನು ಸೈ ಎನಿಸಿಕೊಳ್ಳಲು ಲಾವಣಿಕಾರನು ಈ ಪ್ರಸಂಗವನ್ನು ಇಲ್ಲಿ ಸೇರಿಸಿರಬಹುದೆ? ಅಷ್ಟೆಲ್ಲವನ್ನೂ ದಾನಕೊಟ್ಟ ಈರವ್ವ, ಹಾಗೆ ದಾನ ಕೊಟ್ಟದ್ದರಿಂದ ಕಿತ್ತೂರ ದೌಲತ್ತು ಕಿರಿದಾಯಿತು ಎಂದು ಅಳುವುದು ಈ ಸಂದರ್ಭದಲ್ಲಿ ಎಷ್ಟು ಸಹಜ? ಬಹುಶಃ ಕಿತ್ತೂರ ದೌಲತ್ತಿನ ಮೇಲೆ ಅವಳಿಗಿದ್ದ ಅಪಾರ ಪ್ರೇಮವು ಅವಳಿಂದ ಹಾಗೆ ಮಾಡಿಸಿತೆ? ಅದು ಏನೇ ಆಗಿರಲಿ, ಈರವ್ವ ಕಿತ್ತೂರ ನಾಡಿನಲ್ಲಿ ಒಬ್ಬ ಜನಪ್ರಿಯ ವ್ಯಕ್ತಿ ಎಂಬುದನ್ನು ಲಾವಣಿಯ ಕಡೆಯ ನುಡಿಗಳು ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿಸುತ್ತವೆ.

೮

ಇವಿಷ್ಟೂ ಇಂಡಿಯನ್ ಆಂಟಿಕ್ವರಿ ಪತ್ರಿಕೆಯಲ್ಲಿ ಪ್ರಕಟವಾಗಿರುವ ಫ್ಲೀಟ್ ಅವರು ಸಂಗ್ರಹಿಸಿರುವ ಲಾವಣಿಗಳು. ತಮ್ಮ ಆಜ್ಞೆಗೆ ಎದುರುಬಿದ್ದವರನ್ನು ಕಂಡರೆ ಬೆಂಕಿಯಾಗುತ್ತಿದ್ದ ಬ್ರಿಟಿಷರು ಪಕ್ಕಾ ಕುತಂತ್ರಿಗಳು ಎಂಬ ಅಂಶ ಬಹುಪಾಲು ಲಾವಣಿಗಳಲ್ಲಿ ವ್ಯಕ್ತವಾಗಿದೆ. ಹಾಗೇ ಕಣ್ಣಾಡಿಸುತ್ತ

ಇಂಡಿಯನ್ ಆಂಟಿಕ್ವರಿ ಸಂಚಿಕೆಗಳಲ್ಲಿ ಪ್ರಕಟವಾಗಿರುವ ಇತರ ಭಾಷೆಗಳ ಜನಪದ ಸಾಹಿತ್ಯವನ್ನು ಅವಲೋಕಿಸಿದಾಗ ಫ್ಲೀಟ್ ಅವರ ಕೆಲಸ ಎಷ್ಟು ಪರಿಪೂರ್ಣವಾಗಿದೆ ಎಂಬ ಸಂಗತಿ ಗೋಚರಿಸುತ್ತದೆ :

ಪಾರ್ಸಿ ಮತ್ತು ಗುಜರಾತೀ ಭಾಷೆಯ ಕೆಲವು ಪ್ರೇಮಗೀತೆಗಳನ್ನೂ ಗುಜರಾತೀ ಲಾವಣಿಯನ್ನೂ ಕೊಡುವ ಪುತ್ಲೀಬಾಯಿ ಡಿ.ಎಚ್.ವಾಡಿಯಾ ಅವರು ಹಾಡುಗಾರಿಕೆಯ ಲಕ್ಷಣಗಳ ಯಾವ ಬಗೆಯ ಸೂಚನೆಯೂ ಇಲ್ಲದ ಹಿಂದೀ ಲಿಪಿಯ ಪಠ್ಯ ಮತ್ತು ಅಷ್ಟೇ ಮಟ್ಟಿನ ಅವ್ಯವಸ್ಥೆಯಿಂದ ಕೂಡಿರುವ ಭಾಷಾಂತರವನ್ನು ಕೊಡುತ್ತಾರೆ. ಹೆಣ್ಣುಮಕ್ಕಳಿಂದ ಅವು ಹಾಡಲ್ಪಡುತ್ತವೆ ಎಂದು ಹೇಳುವ ಅವರು ಅವನ್ನು ಹಾಡುವ ರೀತಿನೀತಿಗಳ ಬಗೆಗೆ ಏನನ್ನೂ ಹೇಳುವುದಿಲ್ಲ. ಹಿಂದೂಸ್ಥಾನೀ ಮತ್ತು ಗುಜರಾತೀ ಪದಗಳ ಬೆರಕೆಯ ಇತರ ಪಾಠಗಳು ಸಿಕ್ಕುತ್ತವೆ ಎಂದು ಹೇಳುತ್ತ ಕೈಯಿಂದ ತಾಳಹಾಕುತ್ತ ಉರಿಯುವ ದೀಪದ ಸುತ್ತ ಸುತ್ತುತ್ತ ಹಾಡುತ್ತಾರೆ ಎಂದು ಹೇಳಿ ಪಠ್ಯದ ಭಾಷಾಂತರವನ್ನು ಪ್ರಾರಂಭಿಸಿಬಿಡುತ್ತಾರೆ. ಬರ್ಮಾ ಜಾನಪದದ ಬಗ್ಗೆ ಹೇಳುವ 'ಟಾ ಸೆನ್ ಕೊ' ಅವರು ಜಾನಪದವನ್ನಾಗಲಿ ಅದರ ಯಾವುದೇ ರೂಪದ ವಿವರಣೆಯನ್ನಾಗಲಿ ವಿಶ್ಲೇಷಣೆಯನ್ನಾಗಲಿ ನೀಡದೆ ಕೇವಲ ಕಥೆಯೊಂದರ ಭಾಷಾಂತರವನ್ನು ನೀಡುವುದರೊಂದಿಗೆ ತಮ್ಮ ಕೆಲಸವನ್ನು ಪ್ರಾರಂಭಿಸುತ್ತಾರೆ. ಆಳವಾದ ಅರ್ಥದ ಬಗ್ಗೆ ಶ್ಲಾಘಿಸಲಾಗುವ ಒಂದು ಪ್ರೇಮಗೀತೆಯನ್ನೂ ಅಲ್ಪಸ್ವಲ್ಪ ಪಾಠಾಂತರಗಳೊಡನೆ ಬರ್ಮದಾದ್ಯಂತ ಪ್ರಚಲಿತವಿರುವ ಶಿಶುಪ್ರಾಸವನ್ನೂ ಕುರಿತು ಬರೆಯುವ ಆರ್.ಸಿ.ಟೆಂಪಲ್ ಅವರೂ ಕೂಡ ಲಾವಣಿಯನ್ನು ಕುರಿತು ಇಲ್ಲಿ ಏನನ್ನೂ ಹೇಳುವುದಿಲ್ಲ. ತೆಲುಗು ಲಾವಣಿಗಳನ್ನು ಸಂಗ್ರಹಿಸುವ ಜೆ.ಎ. ಬಾಯ್ಲ್ ಅವರು ಕೆಲವು ಕಡೆ

ಚೌಪದಿಗಳಾಗಿ ವಿಂಗಡಿಸುತ್ತಾರೆ ಅಷ್ಟೆ. ತೆಲುಗು ಜಾನಪದದ ಬಗ್ಗೆ ಬರೆಯುವ ಜಿ.ಆರ್. ಸುಬ್ರಾಮಯ್ಯ ಪಂತುಲು ಅವರೂ ಕೂಡ ಏನನ್ನೂ ಹೇಳದೆ ಕೇವಲ ಕಥೆಗಳನ್ನು ಕೊಡುತ್ತಾರೆ. ಕೆಲವು ಪ್ರೇಮಗೀತೆಗಳನ್ನೂ ಅವನ್ನು ಹಾಡುವ ಸಂದರ್ಭಗಳನ್ನೂ ವಿವರಿಸುವ ಎಸ್.ಎಂ. ನಟೇಶ ಶಾಸ್ತ್ರಿಗಳು ಧಾಟಿಯನ್ನಾಗಲಿ ಇತರ ವಿವರಗಳನ್ನಾಗಲಿ ಕುರಿತು ಏನನ್ನೂ ಹೇಳದೆ ಇಂಗ್ಲಿಷ್ ಲಿಪಿಯ ತೆಲುಗು ಪಠ್ಯವನ್ನೂ ಇಂಗ್ಲಿಷ್ ಭಾಷಾಂತರವನ್ನೂ ಕೊಟ್ಟು ಸುಮ್ಮನಾಗುತ್ತಾರೆ. ಟಿಬೆಟನ್ ಜಾನಪದದ ಬಗ್ಗೆ ಬರೆಯುವ ಎಲ್.ಎ. ವಡ್ಡೆಲ್ ಅವರು ಒಂದು ಪುಟ್ಟ ಜನಪದ ಕಥೆಯನ್ನು ಮಾತ್ರ ಹೇಳುತ್ತಾರೆ. ಉತ್ತರಭಾರತದ ಕೆಲವು ಲಾವಣಿಗಳನ್ನು ಸಂಗ್ರಹಿಸಿರುವ ವಿಲಿಯಂ ಕ್ರೂಕ್ ಅವರು ಕೇವಲ ಪಠ್ಯ ಮತ್ತು ಭಾಷಾಂತರಗಳನ್ನು ಕೊಟ್ಟು ಉಳಿದದ್ದೇನನ್ನೂ ಹೇಳುವುದಿಲ್ಲ. ಬ್ರಾಹೂಇ ಜಾನಪದವನ್ನು ಕುರಿತು ಬರೆಯುವ ಜಿ.ಷರ್ಟ್ ಅವರು, ಹಾಡುವವರು ಸಾಮಾನ್ಯವಾಗಿ ವಿದೇಶೀಯ ಧಾಟಿಯನ್ನು ಇಚ್ಛಿಸುತ್ತಿದ್ದರು ಎಂದು ಮಾತ್ರ ಹೇಳಿ ಒಂದು ಪುಟ್ಟ ಲಾವಣಿಯನ್ನು ಕೊಡುತ್ತಾರೆ.

ಈ ಎಲ್ಲವನ್ನೂ ಹಿನ್ನೆಲೆಯಲ್ಲಿಟ್ಟುಕೊಂಡು ನೋಡುವಾಗ ಫ್ಲೀಟರ ಕೆಲಸ ಅದ್ಭುತವಾಗಿ ಕಾಣುವುದರಲ್ಲಿ ಆಶ್ಚರ್ಯವೇನಿಲ್ಲ. ಪ್ರತಿ ಘಟ್ಟದಲ್ಲೂ ಹಾಡಿನ ಧಾಟಿ ಏರಿಳಿತಗಳನ್ನು ನಿರ್ದಿಷ್ಟವಾಗಿ ಹೇಳುವ ಸಂಶೋಧನಾ ಸೂಕ್ಷ್ಮತೆ ಇಲ್ಲಿದೆ. ಧಾಟಿಯನ್ನು ಗುರುತಿಸುವಾಗ ಚ್ಯೇ ಅಥವಾ ಚ್ಯಾಲ (with a change of meter), ಯೇರ (Raising the vice), ಇಳವ (Lowering the voice) – ಮುಂತಾದ ವಿವರಗಳಿವೆ. ಇಷ್ಟೇ ಅಲ್ಲದೆ ತಮ್ಮ ಲೇಖನದಲ್ಲಿ ಈ ಲಾವಣಿಗಳ ಛಂದಸ್ಸು ಪ್ರಾಸ, ಅನುಪ್ರಾಸ, ರಾಗಗಳನ್ನು

ಕುರಿತೂ ವಿವೇಚಿಸಿರುವುದು ಅವರ ವಿದ್ವತ್ತಿಗೂ ಪ್ರತಿಭೆಗೂ ಜ್ವಲಂತ ಸಾಕ್ಷಿಯಾಗಿವೆ. ೧೮೮೫ರಲ್ಲಿ ಅವರು ಲಾವಣಿಗಳನ್ನು ಪ್ರಕಟಿಸುವ ಮೊದಲು ಎಲ್ಲ ಲಾವಣಿಗಳನ್ನೂ ಅಧ್ಯಯನ ಮಾಡಿ, ತಮ್ಮ ಅನುಭವಗಳನ್ನೂ ಸೇರಿಸುತ್ತ, 'ಕನ್ನಡ ಲಾವಣಿಗಳ ಸಂಗ್ರಹ' (A selection of Kanarese Ballads) ಎಂಬ ಲೇಖನವನ್ನು ಬರೆದಿದ್ದಾರೆ. ಲಾವಣಿಗಳ ಪ್ರಕಟಣೆಗೆ ಆ ಲೇಖನ ನಾಂದಿಹಾಡುತ್ತದೆ. ಅದಲ್ಲದೆ ಪ್ರತೀ ಲಾವಣಿಯ ಹಿನ್ನೆಲೆಯಲ್ಲಿರುವ ರಾಜಕೀಯ ಧಾರ್ಮಿಕ, ಸಾಂಸ್ಕೃತಿಕ, ಚಾರಿತ್ರಿಕ ಅಂಶಗಳನ್ನು ಕುರಿತು ಆಆ ಲಾವಣಿಗಳ ಪ್ರಾರಂಭದಲ್ಲಿ ಪ್ರತ್ಯೇಕ ಲೇಖನಗಳನ್ನೂ ಒದಗಿಸಿದ್ದಾರೆ. ಸಮರ್ಥ ಭಾಷಾಂತರವನ್ನೂ ಅಡಿಟಿಪ್ಪಣಿಗಳಲ್ಲಿ ಎಷ್ಟೋ ಪದಗಳ ಹಿನ್ನೆಲೆಮುನ್ನೆಲೆಗಳನ್ನೂ ಅರ್ಥಗಳನ್ನೂ ಕೊಡುತ್ತಾರೆ. ಇಷ್ಟೆಲ್ಲವನ್ನೂ ಅವರು ಒದಗಿಸಿಕೊಟ್ಟಿರುವುದನ್ನು ಕಂಡಾಗ, ಅದಕ್ಕೆ ಹಿಂದೆ ಅನೇಕ ವರ್ಷಗಳು ಅಧ್ಯಯನದಲ್ಲಿ ತೊಡಗಿದ್ದಿರಬೇಕು ಎನ್ನಿಸುವುದು ಸಹಜ. ಅಧ್ಯಯನಕ್ಕೆ ಸಾಮಗ್ರಿಯಾಗಿ ಸಂಗ್ರಹಿತ ಸಾಹಿತ್ಯ ಅವರಲ್ಲಿದ್ದಿರಲೇಬೇಕು. ಆದ್ದರಿಂದ ಮೊದಲ ಲಾವಣಿ ಪ್ರಕಟವಾಗುವುದಕ್ಕೆ ಬಹಳ ಮುಂಚೆಯೇ ಅವರು ಸಂಗ್ರಹಕಾರ್ಯದಲ್ಲಿ ತೊಡಗಿರಬೇಕೆಂದು ಹೇಳಲು ಅವಕಾಶವಿದೆ. ಕರ್ತವ್ಯದ ಮೇಲೆ ಹಳ್ಳಿಗಳಿಗೆ ಹೋದಾಗ ತಂಗಲೇಬೇಕಾದ ಸಂದರ್ಭಗಳು ಒದಗಿಬಂದಾಗಲೆಲ್ಲಾ ವ್ಯರ್ಥವಾಗಿ ಕಾಲಕಳೆಯದೆ ಹಾಡುಗಾರರನ್ನು ತಮ್ಮ ಬಿಡಾರದ ಬಳಿಗೆ ಕರೆಯಿಸಿಕೊಂಡು ಹಾಡಿಸಿ ಕೇಳುತ್ತಿದ್ದರು ಮತ್ತು ಸಂಗ್ರಹಿಸುತ್ತಿದ್ದರು. ಅಂಥ ಸಂದರ್ಭಗಳಲ್ಲಿ ಸುತ್ತಮುತ್ತಲ ಊರುಗಳ ಜನರು ಬಿಡಾರದ ಸುತ್ತ ಮರಗಿಡಗಳಡಿಯಲ್ಲಿ ಇಡೀ ರಾತ್ರಿ ಕೇಳುತ್ತ ಕುಳಿತಿರುತ್ತಿದ್ದುದೇ ಆ ಲಾವಣಿಗಳ ಜನಪ್ರಿಯತೆಯನ್ನು ಸಾರುತ್ತದೆ. ಸ್ಥಳೀಯ ಹಾಡುಗಾರರು ಹಾಗೂ ದಾಸರು ಎಂಬ ವೃತ್ತಿಗಾಯಕರು ಫ್ಲೀಟರ ವಕ್ತೃಗಳಾಗಿರುತ್ತಿದ್ದರು.

ಉತ್ತರ ಕರ್ನಾಟಕದಲ್ಲಿ ಪ್ರಬಲರಾಗಿದ್ದ ಮುಸ್ಲಿಮರ ಪ್ರಭಾವವು ಭಾಷೆಯಲ್ಲಿ ಹೇರಳವಾಗಿದೆ. ಅದು ಕಾರಣವಾಗಿ ಉರ್ದೂ ಪದಗಳ ಬಳಕೆ ಸಾಕಷ್ಟಿದೆ. ಅಷ್ಟೇ ಮಟ್ಟಿನ ಶುದ್ಧ ಜನಪದ ರೂಪಗಳೂ ಇವೆ. ಹಳೆಯ ಮೈಸೂರಿಗರಿಗೆ ಅರ್ಥವಾಗದ ಶಬ್ದರೂಪಗಳೂ ಹೆಚ್ಚಾಗಿಯೇ ಕಾಣಸಿಗುತ್ತವೆ. ಹತ್ತೊಂಬತ್ತನೆಯ ಶತಮಾನದಲ್ಲಿದ್ದ ನಮ್ಮ ಜನಪದ ಬದುಕಿನ ಸ್ಥಿತಿಗತಿಗಳನ್ನು ಅರಿಯಲು ಫ್ಲೀಟರು ಸಂಗ್ರಹಿಸಿರುವ ಸಾಹಿತ್ಯವು ನೆರವಾಗಿದೆ.

ಪಲ್ಲವಿಯ ಪದ್ಯದಲ್ಲೆ ಇಡೀ ಕಥೆಯ ಸಾರ ಅಡಗಿರುವುದು ಈ ಲಾವಣಿಗಳಲ್ಲಿ ಎದ್ದುಕಾಣುವ ಒಂದು ವೈಶಿಷ್ಟ್ಯ. ಲಾವಣಿಗಳ ಉದ್ದಕ್ಕೂ ಅಲ್ಲಲ್ಲಿ ಕಾಣುವ ಉದ್ಗಾರಗಳು ಸಂದರ್ಭಕ್ಕೆ ತಕ್ಕ ಪರಿಣಾಮ ಬೀರುವುದರಲ್ಲಿ ಯಶಸ್ವಿಯಾಗಿವೆ. ಕನ್ನಡದಲ್ಲಿ ಯಾವ ಸಂಗ್ರಹಕಾರರೂ ಅನುಸರಿಸದ ಉತ್ತಮ ವೈಜ್ಞಾನಿಕ ದೃಷ್ಟಿಯನ್ನು ನಾವು ಫ್ಲೀಟರಲ್ಲಿ ಕಾಣುತ್ತೇವೆ.

೬

ಫ್ಲೀಟರ ಸಮಗ್ರ ಸಂಗ್ರಹವು ಪ್ರಕಟವಾಗುವವರೆಗೆ (೧೯೯೧) ಫ್ಲೀಟರ ಸಂಗ್ರಹವೆಂದರೆ 'ಐದು ಐತಿಹಾಸಿಕ ಲಾವಣಿಗಳು' ಮಾತ್ರ ಎಂಬ ಭಾವನೆ ಇದ್ದದ್ದು ಸಹಜ. ಆದರೆ, ಭಾರತದಲ್ಲಿ ತಮ್ಮ ಕರ್ತವ್ಯ ಮುಗಿದ ಮೇಲೆ, ಸ್ವದೇಶಕ್ಕೆ ಮರಳಿಹೋದ ಫ್ಲೀಟ್ ಅವರಿಗೆ ಅಲ್ಲಿ ಲಾವಣಿಗಳ ಕೆಲಸವನ್ನು ಮುಂದುವರಿಸಲು ಸಾಧ್ಯವಾಗಲಿಲ್ಲ. ಅಲ್ಲಿ ಅದಕ್ಕೆ ಬೇಕಾದ ವಾತಾವರಣ ಇರಲಿಲ್ಲವೋ ಸಲಕರಣೆಗಳ ಅಥವಾ ಸಹಾಯಕರ ಅಭಾವವೋ ಫ್ಲೀಟರ ಆರೋಗ್ಯವೋ ಮನಸ್ಥಿತಿಯೋ ಸಾಂಸಾರಿಕ ಸ್ಥಿತಿಗತಿಗಳೋ ಕಾರಣ ಇಂಥದೇ ಇದ್ದೀತು ಎಂದು ಹೇಳಲಾಗದು. ಅವರು ಮಾಡಿದ ಒಂದು ಪ್ರಶಂಸನಾರ್ಹ ಕೆಲಸವೆಂದರೆ, ತಮ್ಮಲ್ಲಿದ್ದ ಸಂಗ್ರಹಿತ ಸಾಹಿತ್ಯವು ಹಾಳಾಗಲು ಬಿಡದೆ, ಅಷ್ಟೂ ಸಾಹಿತ್ಯವನ್ನು ಲಂಡನ್ನಿನ ಬ್ರಿಟಿಷ್ ಮ್ಯೂಸಿಯಮ್‌ಗೆ ತಮ್ಮ ಸ್ವಇಚ್ಛೆಯಿಂದ

ನೀಡಿದ್ದು. ೧೯೧೭ ಅಕ್ಟೋಬರ್ ೧೩ರಂದು ಬ್ರಿಟಿಷ್ ಮ್ಯೂಸಿಯಂ ಪ್ರವೇಶಿಸಿದ ಅವರ ಅಮೂಲ್ಯ ಹಸ್ತಪ್ರತಿಯು ಈಗಲೂ ಅಲ್ಲಿ ಇದೆ.

ಆ ಹಸ್ತಪ್ರತಿಯೊಂದಿಗೆ ಇರುವ ಎರಡು ಪತ್ರಗಳು ನಮಗೆ ಹೊಸದೊಂದು ಸಂಗತಿಯನ್ನು ತಿಳಿಸುತ್ತದೆ. ಸಮಯಾಭಾವದಿಂದಾಗಿ ಫ್ಲೀಟರು ಇತರರಿಂದಲೂ ಲಾವಣಿಗಳನ್ನೂ ಇತರ ಹಾಡುಗಳನ್ನೂ ಸಂಗ್ರಹಿಸಿ ತರಿಸಿ, ಅನಂತರ ತಮ್ಮ ಬಿಡುವಿನ ವೇಳೆಯಲ್ಲಿ ಅಧ್ಯಯನ ಮಾಡುತ್ತಿದ್ದರು ಎಂಬ ಅಂಶ ಈ ಪತ್ರಗಳಿಂದ ನಮಗೆ ತಿಳಿದುಬರುತ್ತದೆ. ಪತ್ರಗಳಷ್ಟೇ ಅಲ್ಲ, ಅವರ ಹಸ್ತಪ್ರತಿಯಲ್ಲಿ ಇರುವ ಬೇರೆಬೇರೆ ಕೈಬರಹಗಳೂ ಆ ಸಂಗತಿಯನ್ನು ದೃಢಪಡಿಸುತ್ತವೆ.

ತಾವು ಸಂಗ್ರಹಿಸಿದ ಹಾಡುಗಳನ್ನು ಫ್ಲೀಟರು ರಾಗತಾಳಸಹಿತ ವಿಂಗಡಿಸಿಕೊಳ್ಳುತ್ತಿದ್ದ ಅಂಶ ಕೂಡ ಅವರ ಅಪ್ರಕಟಿತ ಹಸ್ತಪ್ರತಿಯಿಂದ ತಿಳಿದುಬರುತ್ತದೆ. ಅವರೇ ವಿಂಗಡಿಸಿಕೊಳ್ಳುತ್ತಿದ್ದರೋ ಸಂಗ್ರಹಿಸಿಕೊಡುತ್ತಿದ್ದ ಅಥವಾ ಬರೆದುಕೊಡುತ್ತಿದ್ದ ಶಾಲಾಮಾಸ್ತರರೋ ಕಾರಕೂನರೋ ವಿಂಗಡಿಸಿ ಕೊಡುತ್ತಿದ್ದರೋ ಎಂಬುದು ಖಚಿತವಾಗುವುದಿಲ್ಲ. ವಿಂಗಡಣೆ ಆಗುತ್ತಿದ್ದುದಕ್ಕೆ ಹಸ್ತಪ್ರತಿಯಲ್ಲಿ ಉದಾಹರಣೆಯಿದೆ; ಅದು ಪಟ್ಟಿಯ ರೂಪದಲ್ಲಿದೆ :

ಪದದ ನಂಬರು	(ಪದದ ಹೆಸರು) ಜಾತಿ	ಪದದ ರಾಗ ಹಾಗೂ ತಾಳ
೧	ಲಾವಣಿ	ರಾಗ ಎರಕಲಕಾಂಬೋದಿ ಆದಿತಾಳ
೨	ಲಾವಣಿ	ರಾಗ ರೇಗುಪ್ತಿ ಆದಿತಾಳ
೩	ಲಾವಣಿ	ರಾಗ ರೇಗುಪ್ತಿ ಆದಿತಾಳ
೪	ಲಾವಣಿ	ರಾಗ ಭೈರವಿ
೫	ದಂಡಕ	ರಾಗ ಸಾರಂಗ
೬	ದಂಡಕ	ಶ್ರೀರಾಗ

ಇದಲ್ಲದೆ, ಲಾವಣಿಯುನ್ನು ಹೇಗೆ ಹಾಡುತ್ತಿದ್ದರೆಂಬುದಕ್ಕೆ ಉದಾಹರಣೆಯಾಗಿ ಫ್ಲೀಟರು ಒಂದು ಸಂಗೀತ ನಕ್ಷೆಯನ್ನೂ (Musical Notation) ಇಂಡಿಯನ್ ಆಂಟಿಕ್ವರಿಯ ಹದಿನಾರನೆಯ ಸಂಪುಟದಲ್ಲಿ ನೀಡಿದ್ದಾರೆ. ಫ್ಲೀಟರ ಸಂಗ್ರಹವೆಂದರೆ ಅದು ಕೇವಲ ಲಾವಣಿಗಳ ಸಂಗ್ರಹವಲ್ಲ. ಇಂಡಿಯನ್ ಆಂಟಿಕ್ವರಿಯಲ್ಲಿ ಪ್ರಕಟವಾದವು ಕೇವಲ ಲಾವಣಿಗಳೇ ಆಗಿದ್ದುದರಿಂದ ಫ್ಲೀಟರ ಸಂಗ್ರಹವೆಂದರೆ ಲಾವಣಿಗಳೆಂಬ ಅಭಿಪ್ರಾಯವಿದೆ. ಆದರೆ ಅವರ ಹಸ್ತಪ್ರತಿಯಲ್ಲಿ ಜೋಗುಳದ ಪದಗಳೂ ದಂಡಕಗಳೂ ಕೋಲುಪದಗಳೂ ಕಲ್ಗಿತುರಾ ಹಾಡುಗಳೂ ಇವೆ. ಅವುಗಳಲ್ಲಿ ಕೆಲವನ್ನು ಇಂಗ್ಲೀಷಿಗೆ ಭಾಷಾಂತರಿಸಲಾಗಿದೆ. ಈ ಭಾಷಾಂತರಗಳು ಬಹುಶಃ ಪ್ರಕಟಣೆಗೆ ಪೂರ್ವಭಾವಿಯಾಗಿ ಇಟ್ಟ ಹೆಜ್ಜೆಗಳಾಗಿವೆ. ಅವರ ಸಂಗ್ರಹದಲ್ಲಿನ ಟಿಪ್ಪಣಿಗಳನ್ನು ಗಮನಿಸಿದಾಗ ಫ್ಲೀಟರು ಒಳ್ಳೆಯ ರೂಪದಲ್ಲಿ ಒಳ್ಳೆಯ ಸ್ಥಿತಿಯಲ್ಲಿ ಇರುವಂಥ ಲಾವಣಿಗಳನ್ನು ಮಾತ್ರ ಪ್ರಕಟಣೆಗೆ ಆಯ್ಕೆ ಮಾಡಿಕೊಳ್ಳುತ್ತಿದ್ದರು ಎಂದೆನ್ನಿಸುತ್ತದೆ.

ಅವರ ಸಂಗ್ರಹದಲ್ಲಿ ಅನೇಕ ಹಾಡುಗಳು ಪುನರಾವರ್ತನೆಯಾಗಿವೆ. ಭಾಷಾಂತರಕ್ಕೂ ಈ ಮಾತು ಅನ್ವಯಿಸುತ್ತದೆ. ಸ್ವಲ್ಪವೂ ವ್ಯತ್ಯಾಸವಿಲ್ಲದ, ಪಾಠಾಂತರ ಎಂದು ಪರಿಗಣಿಸಲಾಗದ, ಜೋಗುಳ ಪದವೊಂದರ ನಾಲ್ಕು ಪ್ರತಿಗಳಿವೆ. ಪಾಠಾಂತರ ಎಂದು ಪರಿಗಣಿಸಬಹುದಾದ ಹಲವು ಹಾಡುಗಳಿವೆ.

೧೦

ಫ್ಲೀಟರು ಸಂಗ್ರಹಿಸಿದ ಸಾಹಿತ್ಯದಲ್ಲಿ ಇತರ ಹಾಡುಗಳಲ್ಲದೆ ಒಟ್ಟು ಹದಿನೇಳು ಲಾವಣಿಗಳಿವೆ. ಅವುಗಳಲ್ಲಿ ಐದು ಇಂಡಿಯನ್ ಆಂಟಿಕ್ವರಿಯಲ್ಲಿ ಪ್ರಕಟವಾಗಿವೆ ಮತ್ತು ಈ ಪುಸ್ತಕದಲ್ಲಿ ಈಗಾಗಲೇ ಪ್ರಸ್ತಾಪವಾಗಿವೆ.

ಪ್ರಕಟವಾಗದೆ ಉಳಿದವು ಹನ್ನೆರಡು : ೧. ಲಾವಣಿ ಪದಾ ೨. ಬಾದಾಮೀ ಕಿಲೆ ಕೆಡವಿದ ಪದ ೩. ಮಂಡ್ರೋಲ ಸಾಹೇಬರ ಪದ ೪. ಕೊಲ್ಲಾಪುರ ಮಹಾರಾಜನ ಪದಾ ೫. ಇಂಗ್ರೆಜಿ ಸಂಸ್ಥಾನದ ಮೇಲಿನ ಪದ ೬. ಸೋಮಾನಗಡದ ಪದ ೭. ಗಲಗಲಿ ದೇಸಾಯಿಯ ಪದ ೮. ಹಲಗಲಿಯ ಪದ ೯. ಕಿತ್ತೂರ ಚನ್ನವ್ವನ ಪದ ೧೦. ನರಗುಂದ ಮೇಲಿನ ಹಾಡು ೧೧. ನರಗುಂದ ಮೇಲಿನ ಪದ ೧೨. ನರಗುಂದ ಪದ.

ಇವುಗಳಲ್ಲಿ 'ಹಲಗಲಿಯ ಪದ' ಎಂಬ ಲಾವಣಿಯ ಇನ್ನೊಂದು ಪಾಠಾಂತರ ಪ್ರಕಟವಾಗಿದೆ. 'ಕಿತ್ತೂರು ಚೆನ್ನವ್ವನ ಪದ' ವು ಈಗಾಗಲೇ ಪ್ರಕಟವಾಗಿರುವ 'ಕಿತ್ತೂರು ಚಎನ್ನವ್ವನ ಸೊಸೆ'ಯು ವಸ್ತುವನ್ನೇ ಒಳಗೊಂಡಿದ್ದರೂ ಈ ಅಪ್ರಕಟಿತ ಲಾವಣಿಯ ಮುಂದುವರಿದ ಭಾಗದಂತಿದೆ ಪ್ರಕಟಿತ ಲಾವಣಿ. ಉಳಿದವು ಮಾತ್ರ ಅಪ್ರಕಟಿತ. ಅನಂತರ ಫ್ಲೀಟರ ಸಮಗ್ರ ಸಂಗ್ರಹದಲ್ಲಿ ಎಲ್ಲವೂ ಪ್ರಕಟವಾಗಿವೆ.

'ಲಾವಣಿ ಪದ' ಎಂಬ ಹಾಡಿನಲ್ಲಿ ಹಂಮಿಗಿಯ ದೇಸಾಯಿಯಾಗಿದ್ದ ಭೀಮರಾಯನನ್ನು ಸೆರೆಹಿಡಿದು ಕೊಲ್ಲುವ ಸಂದರ್ಭವು ಚಿತ್ರಿತವಾಗಿದೆ. ಮದ್ದುಗುಂಡು ಸೋರುಪ್ಪು ಗಂಧಕ ಕಠಾರಿ ಕತ್ತಿ ಬಂದೂಕು ಮುಂತಾದ ಯುದ್ಧಸಾಮಗ್ರಿಗಳನ್ನು ತಂದು ಸರಕಾರಕ್ಕೆ ಒಪ್ಪಿಸದವರನ್ನು ಪತ್ತೆಹಚ್ಚುವ ಕಾರ್ಯದಲ್ಲಿ ಸಿಪಾಯಿಗಳು ತೊಡಗಿದ್ದರು. ಹಂಮಿಗಿ ಗ್ರಾಮದ ದೇಸಾಯಿಯಾದ ಭೀಮರಾಯನ ಮೇಲೆ ಅದೇನು ದ್ವೇಷವಿತ್ತೋ ಆ ಊರಿನ ಶಾನುಭೋಗನಿಗೆ ಸರಕಾರಕ್ಕೆ ಮಾಹಿತಿ ನೀಡಿಬಿಟ್ಟಿದ್ದ. ಅವನಿಗೆ ಸಿಕ್ಕ ಬಹುಮಾನವೆಂದರೆ, ಸಿಪಾಯಿಗಳಿಂದ ಕಿವಿಮೂಗುಗಳನ್ನು ಕೊಯಿಸಿಕೊಂಡದ್ದು. ಬ್ರಿಟಿಷರು ತಮಗೆ ಸಹಾಯಮಾಡಿದವರಿಗೆ ಕೊಡುವ ಬಹುಮಾನಗಳೆಲ್ಲ ಇಂಥವೇ ತಾನೆ?

'ಬಾದಾಮೀ ಕಿಲೆ ಕೆಡವಿದ ಪದ' ವು ಶೀರ್ಷಿಕೆಯೇ ಹೇಳುವಂತೆ ಬಾದಾಮಿಯ ಕೋಟೆಯ ಬ್ರಿಟಿಷರ ದಾಳಿಯಿಂದ ನಾಶವಾದ ಪ್ರಸಂಗವನ್ನು ಒಳಗೊಂಡಿದೆ. 'ಕಳಸ ಇಲ್ಲದ ತೇರಿನ ಗತಿ' ಬಂದಿತು ಬಾದಾಮಿಗೆ ಮುಂತಾದ ಸುಂದರ ವರ್ಣನೆಗಳು ಇದರಲ್ಲಿವೆ.

'ಮಂಡ್ರೋಲ ಸಾಹೇಬರ ಪದ' ಎಂಬ ಲಾವಣಿಯಲ್ಲಿ ಬ್ರಿಟಿಷ್ ಅಧಿಕಾರಿಯೊಬ್ಬನ ದಾಳಿಗೆ ಸಿಕ್ಕ ಶ್ರೀಮಂತರು ಪುಂಡರು ಪಾಳ್ಳೇಗಾರರು ಎಲ್ಲರೂ ತಮ್ಮದೆಲ್ಲವನ್ನೂ ಬಿಟ್ಟು ಓಡಿಹೋದ ಪ್ರಸಂಗ, ಧಾರವಾಡ ಬೆಳಗಾವಿ ಬಾದಾಮಿ ಗದಗ ನವಲಗುಂದ ಮುಂತಾದ ಕೋಟೆಗಳನ್ನು ನಾಶಪಡಿಸಿ ವಶಪಡಿಸಿಕೊಂಡ ಪ್ರಸಂಗಗಳು, ಇತ್ಯಾದಿಗಳಿವೆ.

'ಕೊಲ್ಲಾಪುರ ಮಹಾರಾಜನ ಪದಾ' : ಏಳು ಹೆಡೆಯ ಸರ್ಪ. ಅದರ ಬಾಯಿಯಲ್ಲಿ ಒಂದು ರತ್ನ. ಬೆಳುದಿಂಗಳ ಬೆಳಕನ್ನು ಸುರಿಸುವ ಶಕ್ತಿ ಆ ರತ್ನಕ್ಕಿದೆ. ಆ ಸರ್ಪದ ತಲೆಯನ್ನು ತಿಂದವನು ದೊರೆಯಾಗುತ್ತಾನೆ. ಇಂಥ ಒಂದು ಜನಪ್ರಿಯ ಆಶಯವನ್ನುಳ್ಳ ಲಾವಣಿ ಇದು.

'ಇಂಗ್ರೇಜಿ ಸಂಸ್ಥಾನದ ಮೇಲಿನ ಪದ' : ಉದ್ದಿಮೆ ವ್ಯವಹಾರಗಳಿಗಾಗಿ ಬಂದ ಆಂಗ್ಲರು ಸ್ಥಳೀಯರಿಗೆ ಆಮಿಶಗಳನ್ನು ಒಡ್ಡಿ ಅವರದೆಲ್ಲವನ್ನು ವಶಪಡಿಸಿಕೊಂಡು ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸುತ್ತ ಹೋಗುವ ಚಿತ್ರಗಳನ್ನುಳ್ಳ ಲಾವಣಿ.

'ಗಲಗಲಿ ದೇಸಾಯಿಯ ಪದ' : ಬ್ರಿಟಿಷರ ದಾಳಿಯಿಂದ ಅಪಾರ ಕಷ್ಟನಷ್ಟಗಳನ್ನು ಅನುಭವಿಸಿದ ಗಲಗಲಿಯ ದೇಸಾಯಿಯು ಬೇಸತ್ತು ತನ್ನ ಸಂಸ್ಥಾನವನ್ನೆ ತೊರೆಯುವ ಪ್ರಸಂಗವುಳ್ಳ ಲಾವಣಿ ಇದು.

೧೧

'ಜೋಗುಳದ ಪದಗಳು' ಎಂಬುದು ಫ್ಲೀಟರ ಸಂಗ್ರಹದ ಇನ್ನೊಂದು ಭಾಗ. ಇದರಲ್ಲಿ ನಾಲ್ಕು ಹಾಡುಗಳಿವೆ. ಲಾವಣೀ ರೂಪದ ಜೋಗುಳದ ಪದವೂ ಇದೆ.

ಮುಂದಿನ ಭಾಗದಲ್ಲಿ ನಾಲ್ಕು ದಂಡಕಗಳಿವೆ. 'ದಂಡಕ' ಎಂಬುದು ಒಂದು ಛಂದೋವೃತ್ತದ ರೂಪವಾಗಿದೆ. ಇಲ್ಲಿ ಫ್ಲೀಟರು ಸಂಗ್ರಹಿಸಿಕೊಟ್ಟಿರುವ ನಾಲ್ಕು ದಂಡಕಗಳಲ್ಲಿಯೂ ಶಿಷ್ಟ ಲಕ್ಷಣಗಳಿವೆ – ರಚನೆಯಲ್ಲಿ ಮತ್ತು ಭಾಷೆಯಲ್ಲಿ ಕಂದಾಯ ಇಲಾಖೆಯ ಹಲವು ಚಿತ್ರಗಳಿವೆ. ಬೀಳ್ಭೂಮಿ, ಟಿಪ್ಪಣಿ, ಪಹಣಿ, ಸರ್ಕಾರಿ ಹೊಲ, ಜಮಾಬಂದಿ, ಖರಾಬು – ಹೀಗೆ ಸಾಂದರ್ಭಿಕವಾಗಿ ಶಬ್ದಗಳು ಪ್ರವೇಶಿಸುತ್ತವೆ. ಒಂದು ದಂಡಕದಲ್ಲಿಯಂತೂ ಬ್ರಿಟಿಷರ ಇನ್ನೊಂದು ಬಗೆಯ ಕ್ರೌರ್ಯವಿದೆ. ಪ್ರಶ್ನೆ ಮಾಡಿದವರನ್ನು ಹಿಡಿಸಿ ಎಳೆತರಿಸಿ ಹಿಂಡಿ ಹಿಪ್ಪೆಮಾಡಿದಮೇಲೂ ಅವರನ್ನು ಕೊಂದು, ಅವರ ಹೆಂಡಂದಿರನ್ನು ಹಿಡಿತರಿಸಿ ಅತ್ಯಾಚಾರಮಾಡಿ ಕೊಲ್ಲುವ ಚಿತ್ರಗಳಿವೆ. "ಪರಸತಿಗೆ ಮನಗೊಟ್ಟು । ಸಲೆ ಚಲುವ ಸತಿಯರನು । ಜುಲುಮಿಂದ ಹಿಡತರಿಸಿ । ಬಲುಭಂಗಮಂಬಡಿಸಿ । ಪತಿವ್ರತವ ತಾ ಕೆಡಿಸಿ ।" ಮುಂತಾದ ವರ್ಣನೆಗಳು ದಂಡಕಗಳಲ್ಲಿವೆ. ರಚನೆಗಳು ಪಂಡಿತಶೈಲಿಯಲ್ಲಿವೆ. ಆದ್ದರಿಂದ, ದಂಡಕಗಳನ್ನು ಜಾನಪದದಿಂದ ಹೊರಗಿಡುವುದೇ ಸೂಕ್ತ ಎನ್ನಿಸುತ್ತದೆ.

ಫ್ಲೀಟರ ಸಮಗ್ರ ಸಂಗ್ರಹದ ಹಸ್ತಪ್ರತಿಯ ನಡುವೆ ಎಂಟು ಇಂಗ್ಲೀಷ್ ರಚನೆಗಳೂ ಇವೆ. ಇವು ವಾಸ್ತವವಾಗಿ ಇಂಗ್ಲೀಷ್ ರಚನೆಗಳಲ್ಲ, ಇಂಗ್ಲೀಷಿಗೆ ಭಾಷಾಂತರಿಸಲ್ಪಟ್ಟವು. ಕೆಲವು 'ಪಲ್ಲ'ಗಳು, ಒಂದು ಅಪೂರ್ಣ ಲಾವಣಿ, 'ಗಿಲಿಜಾ ದುರ್ಗದ ಪೋವಾಡ' ಎಂಬ ಒಂದು ಮರಾಠಿ ಲಾವಣಿ, ಫ್ಲೀಟರ ಸಂಗ್ರಹದಲ್ಲಿವೆ.

೧೨

ಫ್ಲೀಟರ ಹಸ್ತಪ್ರತಿಯಲ್ಲಿರುವ ಕೆಲವು ಟಿಪ್ಪಣಿಗಳಂತೂ ತುಂಬ ಕುತೂಹಲಕಾರಿಯಾಗಿವೆ. Ballads of which I have copies ಎಂಬುದಾಗಿ ಅವರು ಹತ್ತೊಂಬತ್ತು ಬಗೆಯ ಹಾಡುಗಳನ್ನು ಪಟ್ಟಿಮಾಡಿದ್ದಾರೆ. ಪ್ರತಿಯೊಂದು ಹಾಡಿನ ಪ್ರಾರಂಭದ ಸಾಲನ್ನು ಗುರುತುಮಾಡಿ, ಕೆಲವಕ್ಕೆ Good ಎಂದು ಟಿಪ್ಪಣಿಹಾಕಿದ್ದಾರೆ. ಪಾಠಾಂತರವೊಂದು ಹೊಸದಾಗಿ ಸಿಕ್ಕಿದಾಗ, ಈಗಾಗಲೇ ತಮ್ಮಲ್ಲಿರುವ ಪ್ರತಿಯೊಡನೆ ಹೋಲಿಸಿನೋಡಿ A song of Rayanna different to the one I have ಎಂದು ಟಿಪ್ಪಣಿ ಬರೆದಿದ್ದಾರೆ. ಅಷ್ಟೇ ಅಲ್ಲ, ತಮಗೆ ಸಿಕ್ಕಿದ ಮಾಹಿತಿಗಳನ್ನೂ ನಮೂದಿಸಿಕೊಳ್ಳುವ ಕ್ರಮವನ್ನೂ ಫ್ಲೀಟ್ ಅವರು ಅನುಸರಿಸುತ್ತಿದ್ದರು ಎಂಬುದಕ್ಕೆ ಇಲ್ಲಿ ಎಡು ಉದಾಹರಣೆಗಳನ್ನು ಎತ್ತಕೊಳ್ಳಬಹುದು: 1. In Hossur, 6 miles west of Samkesvar, there is Balaji Amrita Goudalay knows marathi ballads. 2. In Chikkalgud, near Hebbal there is an Ayya's son who knows good canarese ballads.

೧೩

ಫ್ಲೀಟರ ಸಮಗ್ರ ಸಂಗ್ರಹದಲ್ಲಿ ಲಾವಣಿಗಳೂ ಸೇರಿದಂತೆ ಆರುಬಗೆಯ ಗೀತಪ್ರಕಾರಗಳಿವೆ. ಅವೆಲ್ಲವುಗಳ ಒಟ್ಟು ಸಂಖ್ಯೆ ನಲವತ್ತೇಳು. ಈ ಹಾಡುಗಳ ಮೂಲಕ ಬ್ರಿಟಿಷ್ ಸರಕಾರದ ಬಗ್ಗೆ ಜನಾಭಿಪ್ರಾಯ ಸಂಗ್ರಹಣೆಯು ಫ್ಲೀಟರ ಉದ್ದೇಶ ಆಗಿರಲಿಲ್ಲ ಎಂದು ಹೇಳಲು ಪುರಾವೆಗಳಿಲ್ಲ. ಮತ್ತು ಹಾಗೆ ಮಾಡುವುದರಿಂದ ಸರಕಾರದ ಪ್ರೀತಿಯನ್ನು ಅವರು ವಿಶೇಷವಾಗಿ ಗಳಿಸಿಕೊಂಡಿರಲಿಲ್ಲ ಎಂದು ಹೇಳಲು ಕೂಡ ಪುರಾವೆಗಳಿಲ್ಲ. ಅದೇನೇ ಇರಲಿ, ಜಾನಪದ ಕ್ಷೇತ್ರದಲ್ಲಿ ಅವರು ಸಾಧಿಸಿರುವ ಮೇರುಸದೃಶ ಕೆಲಸಗಳು ನಮ್ಮ ಮುಂದೆ ಇವೆ. ಅವರ ಪ್ರತಿಭೆಯನ್ನು ಗುರುತಿಸಲು ಇಂಡಿಯನ್ ಆಂಟಿಕ್ವರಿ ಸಂಪುಟಗಳಲ್ಲಿ, ಪ್ರಕಟವಾಗಿರುವ ಐದು ಲಾವಣಿಗಳು ಹಾಗೂ ಅವುಗಳ ಹಿನ್ನೆಲೆಯ ಐತಿಹಾಸಿಕ ಪೂರಕ ಮಾಹಿತಿಗಳು ಸಾಕು. ಸಂಗ್ರಹಕಾರ್ಯದಲ್ಲಿ ಅವರು ಮೊದಲಿಗರು ಮತ್ತು ಲಾವಣಿ ಸಾಹಿತ್ಯದ ಬಗ್ಗೆ ಸಂಶೋಧನಾತ್ಮಕ ಲೇಖನ ಬರೆದ ಮೊದಲಿಗರೂ ಅವರೇ (೧೮೮೫). ಒಟ್ಟಿನಲ್ಲಿ ಕನ್ನಡ ಜಾನಪದ ಲೋಕದ ಪ್ರಾತಃಸ್ಮರಣೀಯ ವಿದ್ವಾಂಸರು ಜಾನ್ ಫೆಯ್ತ್‌ಫುಲ್ ಫ್ಲೀಟ್ ಅವರು.

* * *

ಜಾನ್ ಫೇಯ್ತ್‌ಫುಲ್ ಫ್ಲೀಟ್

ಇಂಗ್ಲೆಂಡಿನ ಜೆ.ಎಫ್. ಫ್ಲೀಟ್ ಭಾರತಕ್ಕೆ ಬಂದು ವಿವಿಧ ಭಾಗಗಳಲ್ಲಿ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡಿದ ಬ್ರಿಟಿಷ್ ಅಧಿಕಾರಿ. ಆಳುವ ಪರಕೀಯರ ಬಗೆಗೆ ಸ್ಥಳೀಯ ಜನರ ಅಭಿಪ್ರಾಯ ತಿಳಿಯುವ ಸಲುವಾಗಿ ಅವರು ಸಂಗ್ರಹಿಸಿದ ಸಾಹಿತ್ಯ ಇಂದಿನ ಅಧ್ಯಯನದ ಸಂದರ್ಭದಲ್ಲಿ ಕುತೂಹಲಕಾರಿಯಾಗಿದೆ. ಕನ್ನಡ ಭಾಷೆ ಸಾಹಿತ್ಯ ಶಾಸನ ಲಾವಣಿಗಳ ಬಗೆಗೆ ಅವರು ಬರೆದಿರುವ ಹಾಗೂ ಸಂಗ್ರಹಿಸಿರುವ ಸಾಹಿತ್ಯ ಮೌಲಿಕವಾಗಿದೆ. ಕನ್ನಡ ಜನಪದ ಸಾಹಿತ್ಯಕ್ಕೆ ಫ್ಲೀಟರು ನೀಡಿರುವ ಕೊಡುಗೆ ಲಾವಣಿ ಸಂಗ್ರಹ ಸಾಹಿತ್ಯ.

ಕನ್ನಡದ ಸುಪ್ರಸಿದ್ಧ ಜಾನಪದ ತಜ್ಞರಲ್ಲಿ ಒಬ್ಬರಾದ ಕ್ಯಾತನಹಳ್ಳಿ ರಾಮಣ್ಣ ಅವರು ಪ್ರಸ್ತುತ ಗ್ರಂಥದಲ್ಲಿ ಫ್ಲೀಟರ ಸಾಧನೆಯನ್ನು ಆತ್ಮೀಯವಾಗಿ ಪರಿಚಯ ಮಾಡಿದ್ದಾರೆ.

–ಪ್ರೊ. ಡಿ. ಲಿಂಗಯ್ಯ

ಕರ್ನಾಟಕ ಜಾನಪದ ಪರಿಷತ್ತು
ನಂ.1, ಜಲದರ್ಶಿನಿ ಬಡಾವಣೆ,
ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ಹೊಸ ಬಿ.ಇ.ಎಲ್. ರಸ್ತೆ, ಬೆಂಗಳೂರು – 560 054